ವಿಜಯಪುರ | ಸಂಪುಟ 04 | ಸಂಚಿಕೆ 148 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ಆಗಸ್ಟ್, 02, 2026

"ರಾಹುಲ್ ಗಾಂಧಿಯವರೇ, ನಮ್ಮ ಸಿಎಂ ಡಿಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಕಳೆದ 2 ತಿಂಗಳಿಂದ ಸಚಿವರ ಪಟ್ಟ ಹಿಡಿದುಕೊಂಡು ನಿಮ್ಮ ಮನೆ ಬಾಗಿಲಿಗೆ ಎಡತಾಕುತ್ತಿದ್ದಾರೆ. ಅವರನ್ನು ನಾಳೆ ಬಾ ಅಂತ ಕಳುಹಿಸುತ್ತಿದ್ದೀರಾ. ಅವರು ಅಂಥ ಭಕ್ತರಾ ಅಥವಾ 3 ಈಡಿಯಟ್‌ಗಳಾ?"



■ ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು




## ಜಗ ಬೆಳಗಿದ ಜ್ಯೋತಿಯ ಜನ್ಮಸ್ಥಳ ಇಂಗಳೇಶ್ವರ ಇನ್ನೂ ಕತ್ತಲೆಯಲ್ಲಿ। ಸರ್ಕಾರದ ವಿರುದ್ಧ ರೈತ ಮುಖಂಡ ಅರವಿಂದ ಕುಲಕರ್ಣಿ ಆಕ್ರೋಶ

# ಅಭಿವೃದ್ಧಿಯಿಂದ ವಂಚಿತ ಇಂಗಳೇಶ್ವರ ಗ್ರಾಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶ್ವಗುರು ಬಸವಣ್ಣನವರ ಜನ್ಮಸ್ಥಳವಾದ ಇಂಗಳೇಶ್ವರ ಗ್ರಾಮವು ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆಯುಳ್ಳ ಗ್ರಾಮವಾಗಿದ್ದು ಇನ್ನೂ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದು, ಅಭಿವೃದ್ಧಿ ಶೂನ್ಯವಾಗಿದೆ ಸರ್ಕಾರ ಕೂಡಲೇ ಗ್ರಾಮದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂದು ರೈತ ಮುಖಂಡ ಹಾಗೂ ಬಸವಣ್ಣನವರ ವಂಶಸ್ಥರಾದ ಅರವಿಂದ ಕುಲಕರ್ಣಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

ಶನಿವಾರದಂದು ನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಕರೆದಿದ್ದ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಗತ್ತಿಗೆ ಸಮಾನತೆ ಮತ್ತು ಮಾನವತೆಯ ಸಂದೇಶ ಸಾರಿದ ಬಸವಣ್ಣನವರ ಜನ್ಮಸ್ಥಳದಲ್ಲೇ ಅಭಿವೃದ್ಧಿಯ ಕೊರತೆ ಕಾಡುತ್ತಿದೆ ಎಂದು ಅರವಿಂದ ಕುಲಕರ್ಣಿ ವಿಷಾದ ವ್ಯಕ್ತಪಡಿಸಿದ್ದಾರೆ.

ಗ್ರಾಮದಲ್ಲಿ ಇದುವರೆಗೆ ಬಸ್ ನಿಲ್ದಾಣ ನಿರ್ಮಾಣವಾಗಿಲ್ಲ. ಪ್ರತಿದಿನ ಬಸವ ಜನ್ಮಸ್ಥಳ ವೀಕ್ಷಣೆಗೆ ಆಗಮಿಸುವ ನೂರಾರು ಭಕ್ತರು ಹಾಗೂ ಪ್ರವಾಸಿಗರು ಬಿಸಿಲು, ಮಳೆ, ಗಾಳಿ ನಡುವೆ ಬಯಲಿನಲ್ಲಿ ಬಸ್‌ಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ. ಶೌಚಾಲಯದ ಇಲ್ಲದ ಕಾರಣ ಮಹಿಳೆಯರು ಮತ್ತು ವಯೋವೃದ್ಧರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಅದರಲ್ಲಿ ಮುಖ್ಯವಾಗಿ ಮಹಿಳೆಯರು ಮುಖಮುಚ್ಚಿಕೊಂಡು ಬಹಿರ್ದೆಸೆಗೆ ಹೋಗಬೇಕಾಗುತ್ತದೆ. ಬಸವ ಜನ್ಮ ಸ್ಥಳದಲ್ಲಿ ಇಂತಹ ದುಸ್ಥಿತಿಯನ್ನು ಕಂಡು ಸರ್ಕಾರಕ್ಕಷ್ಟೇ ಅಲ್ಲ ಗ್ರಾಮಸ್ಥ-ರಿಗೆ ಉಗಿದು ಹೋಗುತ್ತಿದ್ದಾರೆ. ಇದು ಇಂಗಳೇಶ್ವರ ಗ್ರಾಮದ ಜನತೆಗೆ ಅಪಮಾನವಾಗುತ್ತಿದೆ. ಕಾರಣ ಸರ್ಕಾರ ತಕ್ಷಣವೇ ಸುಸಜ್ಜಿತ ಬಸ್ ನಿಲ್ದಾಣ ಹಾಗೂ ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕು ಎಂದರು. ಶೈಕ್ಷಣಿಕ ಕ್ಷೇತ್ರದಲ್ಲಿಯೂ ಗ್ರಾಮ ಹಿಂದುಳಿದಿದ್ದು, ಸರ್ಕಾರಿ ಶಾಲೆ 10ನೇ ತರಗತಿವರೆಗೆ ಮಾತ್ರ ಇದೆ. ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಬೇರೆ ಊರುಗಳಿಗೆ ತೆರಳಬೇಕಾಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆ ಇದ್ದರೂ ಹೆಚ್ಚಿನ ದೇಣಿಗೆ ನೀಡಲು ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಇಂಗಳೇಶ್ವರ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರಂಭಿಸಬೇಕೆಂದು ಅವರು ಆಗ್ರಹಿಸಿದರು.

ಸುಮಾರು 14 ರಿಂದ 15 ಸಾವಿರ ಜನಸಂಖ್ಯೆ ಹೊಂದಿರುವ ಇಂಗಳೇಶ್ವರ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವೂ ಇಲ್ಲ. ತುರ್ತು ಆರೋಗ್ಯ ಸಮಸ್ಯೆ ಎದುರಾದರೆ ಬಸವನ ಬಾಗೇವಾಡಿ ಅಥವಾ ವಿಜಯಪುರಕ್ಕೆ ತೆರಳಬೇಕಾಗಿದ್ದು, ಇದರಿಂದ ಅಮೂಲ್ಯ ಜೀವಗಳಿಗೆ ಅಪಾಯ ಎದುರಾಗುವ ಸಾಧ್ಯತೆ ಇದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಬಸವನ ಬಾಗೇವಾಡಿ ಅಭಿವೃದ್ಧಿ ಮಂಡಳಿ ರಚಿಸಿ ಒಂದು ವರ್ಷ ಕಳೆದರೂ ಇದುವರೆಗೆ ಬಿಡಿಗಾಸು ಅನುದಾನ ಬಿಡುಗಡೆ ಮಾಡಿಲ್ಲ ಎಂದು ಆರೋಪಿಸಿದ ಅವರು, ಇಂಗಳೇಶ್ವರ ಸೇರಿದಂತೆ ತಂಗಡಗಿ, ದೇವರ ಹಿಪ್ಪರಗಿ, ಮಸಬಿನಾಳ, ದೇಗಿನಾಳ ಸೇರಿದಂತೆ ಶರಣ-ರ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಇಂಗಳೇಶ್ವರ ಗ್ರಾಮದ ಸಮಗ್ರ ಅಭಿವೃದ್ಧಿಗೆ ಕ್ಷೇತ್ರದ ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ಶಿವಾನಂದ ಪಾಟೀಲ ಅವರು ವಿಶೇಷ ಆಸಕ್ತಿ ವಹಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಅರವಿಂದ ಕುಲಕರ್ಣಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ರೈತ ಪರ ಹೋರಾಟಗಾರರಾದ ದತ್ತಾತ್ರೆಯ ಕುಲಕರ್ಣಿ, ನಾಗಪ್ಪ ಚಿಗರಿ, ಅಶೋಕ ಕುಲಕರ್ಣಿ, ರೇವಣಸಿದ್ದ ಐಗಳಿ, ಸೋಮು ದೇವೂರ, ಅವ್ವಪ್ಪ ಸಣ್ಣಿ, ಗಿರೀಶ ಕುಲಕರ್ಣಿ ಸೇರಿದಂತೆ ಹಲವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

### ಪಂಚಲೋಹದ ಅಶ್ವಾರೂಢ ಬಸವೇಶ್ವರರ ಪ್ರತಿಮೆ ಸ್ಥಾಪಿಸಿ


ಈ ಸಂದರ್ಭದಲ್ಲಿ ಸಾಹಿತಿ ನಾಗಪ್ಪ ಚಿಗರಿ, ಕಲಾವಿದ ರೇವಣಸಿದ್ದ ಐಗಳಿ ಮಾತನಾಡಿ, ಗ್ರಾಮದ ಬಸ್ ನಿಲ್ದಾಣ ಆವರಣದಲ್ಲಿರುವ ಬಸವೇಶ್ವರರ ಸಿಮೆಂಟ್ ಪ್ರತಿಮೆ ಸಂಪೂರ್ಣ ಹಾಳಾಗಿದ್ದು, ಅದರ ಬದಲಿಗೆ ಸರ್ಕಾರ ಘೋಷಿಸಿರುವ ಪಂಚಲೋಹದ ಅಶ್ವಾರೂಢ ಬಸವೇಶ್ವರರ ಪ್ರತಿಮೆ ಸ್ಥಾಪನೆ ನೆನಗುದಿಗೆ ಬಿದ್ದಿದ್ದು ಶೀಘ್ರ ಪುತ್ಥಳಿ ನಿರ್ಮಿಸಿ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಬಸವಣ್ಣನವರ ಜೀವನ ಚರಿತ್ರೆಗೆ ಸಂಬಂಧಿಸಿದ ಹಾಲಭಾವಿಯಿಂದ ಸ್ಮಾರಕದವರೆಗೆ ದ್ವಿಪಥ ರಸ್ತೆ ನಿರ್ಮಿಸಿ, ಡಿವೈಡರ್ ಹಾಗೂ ವಿದ್ಯುತ್ ದೀಪಗಳ ಅಳವಡಿಕೆ ಕಾಮಗಾರಿಯನ್ನು ತಕ್ಷಣ ಆರಂಭಿಸಬೇಕು ಎಂದು ಅವರು ಆಗ್ರಹಿಸಿದರು.

## ಆ.8ರಿಂದ ಲೋಕಾ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಪ್ರವಾಸ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ಎಸ್.ಪಾಟೀಲ ಅವರು ಆ.8 ರಿಂದ 10ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಆಗಸ್ಟ್ 8ರಂದು ಮಧ್ಯಾಹ್ನ ವಿಜಯಪುರಕ್ಕೆ ಆಗಮಿಸುವ ಅವರು, ಮಧ್ಯಾಹ್ನ 3 ರಿಂದ 4:30ರವರೆಗೆ ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿ,ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ,ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿ ಹಾಗೂ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಂಜೆ 5 ಗಂಟೆಗೆ ನಗರದ ಬಾಗಲಕೋಟೆ ರಸ್ತೆಯಲ್ಲಿರುವ ಸಿಕ್ಯಾಬ್ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವರು ಅಂದು ವಾಸ್ತವ್ಯ ಮಾಡುವರು. ಆಗಸ್ಟ್ 10ರಂದು ಮಧ್ಯಾಹ್ನ 1:30ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



## ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರಿಗೆ ಸಂಸದರ ಗೌರವ

■ ಉದಯರಶ್ಮಿ ದಿನಪತ್ರಿಕೆ

ನವದೆಹಲಿ: ಇಲ್ಲಿಯ ವಸಂತ ಕುಂಜ್‌ನಲ್ಲಿರುವ ಶ್ರೀ ವೇದವ್ಯಾಸ ಗುರುಕುಲ ಹಾಗೂ ಶ್ರೀ ಕೃಷ್ಣಧಾಮ ಮಠದಲ್ಲಿ ಉಡುಪಿಯ ಪೇಜಾವರ ಅಧೋಕ್ಷಜ ಮಠದ ಪೀಠಾಧಿಪತಿಗಳಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ತಮ್ಮ ಚಾತುರ್ಮಾಸ್ಯ ಆರಂಭಿಸಿದ್ದು, ಈ ಸಂದರ್ಭದಲ್ಲಿ ವಿಜಯಪುರ ಸಂಸದ ರಮೇಶ ಜಿಗಜಿಣಗಿ ಹಾಗೂ ಬಾಗಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ ಅವರು ಶ್ರೀಗಳನ್ನು ಭೇಟಿ ಮಾಡಿ ವಿಶೇಷ ಗೌರವ ಸಲ್ಲಿಸಿ, ಶ್ರೀಗಳಿಂದ ಅನುಗ್ರಹ ಪಡೆದುಕೊಂಡರು.

ನವದೆಹಲಿಯಲ್ಲಿ ಕೈಗೊಂಡಿರುವ ಈ ಪವಿತ್ರ ಧಾರ್ಮಿಕ ಸಂಕಲ್ಪ ಯಶಸ್ವಿಯಾಗಲಿದೆ ಎಂದು ಸಂಸದ ಜಿಗಜಿಣಗಿ ಶುಭ ಕೋರಿದರು. ಅನೇಕ ಹೊತ್ತು ಶ್ರೀಗಳೊಂದಿಗೆ ವಿವಿಧ ವಿಷಯಗಳ ಬಗ್ಗೆ ಜಿಗಜಿಣಗಿ ಅವರು ಚರ್ಚೆ ನಡೆಸಿದರು.

### ಇಡೀ ವಿಶ್ವವೇ ಕರ್ನಾಟಕವನ್ನು ಗಮನಿಸುತ್ತಿದೆ। ರಾಜ್ಯವನ್ನು ರಕ್ಷಿಸಿ। ಪ್ರಧಾನಿ ನರೇಂದ್ರ ಮೋದಿಗೆ ಸಿಎಂ ಡಿಕೆಶಿ ಮನವಿ


# ರಾಜ್ಯದ ಅಭಿವೃದ್ಧಿಗೆ ನಿಮ್ಮ ಸಹಕಾರ ಬೇಕು :ಸಿಎಂ

ಮೈಸೂರು: 'ಕರ್ನಾಟಕದ ಮೂಲಕ ಭಾರತವನ್ನು ಇಡೀ ಜಗತ್ತು ನೋಡುತ್ತಿದೆ. ಹಾಗಾಗಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುವಂತೆ ಪ್ರಧಾನಿ ನರೇಂದ್ರ ಮೋದಿ' ಅವರಿಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಶನಿವಾರ ಮನವಿ ಮಾಡಿದರು.

ಶನಿವಾರ ಮೈಸೂರಿನಲ್ಲಿ ಪ್ರಧಾನಿ ಮೋದಿ ಭಾಗವಹಿಸಿದ್ದ ಸ್ವಾಮಿ ವಿವೇಕಾನಂದ ಸ್ಮಾರಕ ಹಾಗೂ ಸಾಂಸ್ಕೃತಿಕ ಯುವ ಕೇಂದ್ರ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ, ಕರ್ನಾಟಕದ ಅಭಿವೃದ್ಧಿಗೆ ನಿಮ್ಮ ಸಹಾಯ ಮತ್ತು ಸಹಕಾರ ಬೇಕು. ರಾಜ್ಯವನ್ನು ರಕ್ಷಿಸಿ ಎಂದು ಮನವಿ ಮಾಡಿದರು.

ಇದೊಂದು ಐತಿಹಾಸಿಕ ಕಾರ್ಯಕ್ರಮ. ಯುವಕರ ಕನಸು ದೇಶದ ಕನಸಾಗಿದೆ. ವಿವೇಕಾನಂದರ ಯೋಚನೆಗಳನ್ನು ನಮ್ಮ ಸರ್ಕಾರ ಪಾಲಿಸುತ್ತೆ. ಇಡೀ ವಿಶ್ವವೇ ಇಂದು ಕರ್ನಾಟಕವನ್ನು ಗಮನಿಸುತ್ತಿದೆ. ಹಳ್ಳಿ, ನಗರಗಳಲ್ಲಿ ಯುವಶಕ್ತಿ ಸರಿಯಾಗಿ ಬಳಸಿಕೊಳ್ಳಬೇಕು, ಹಾಗಾಗಿ ಕೆಲ ಯೋಜನೆಗಳನ್ನು ಜಾರಿಗೆ ತರಲು ಚಿಂತನೆ ನಡೆದಿದೆ ಎಂದು ಸಿಎಂ ಹೇಳಿದರು.

ಕರ್ನಾಟಕ ಇಡೀ ದೇಶದ ಪ್ರಮುಖ ರಾಜ್ಯ. ಕರ್ನಾಟಕದ ವಾತಾವರಣ, ಸಂಸ್ಕೃತಿ ನೋಡಿ. ಇದು ಸಂಕಲ್ಪ ಭೂಮಿ. ನಾವು ನೀವೂ ಜೊತೆಯಾಗಿ ಸೇರಿ ಈ ಕರ್ನಾಟಕ ಬೆಳೆಸೋಣ. ಭಾರತ ಕರ್ನಾಟಕದ ಜೊತೆ ಅಭಿವೃದ್ಧಿಯಾಗಲಿ. ನಾವೆಲ್ಲ ಒಟ್ಟಾಗಿ ಸೇರಿ ಕೆಲಸ ಮಾಡೋಣ. ನಮಗೆ ನಿಮ್ಮ ಸಹಕಾರ ಬೇಕು ಎಂದು ಡಿಕೆಶಿ, ಪ್ರಧಾನಿ ಮೋದಿಗೆ ಕೇಳಿಕೊಂಡರು.



ನಮ್ಮ ಸರ್ಕಾರ ವಿವೇಕಾನಂದರ ಕನಸುಗಳನ್ನು ಹೊಂದಿದೆ. ಗ್ರಾಮ ಪಂಚಾಯಿತಿ, ನಗರದಲ್ಲಿ ಯುವಜನತೆ ಪಡೆಗಳ ಕಟ್ಟುವ ಸಂಕಲ್ಪ ಮಾಡಿದ್ದೇನೆ. ಈ ಆಶ್ರಮ ಕರ್ನಾಟಕದ ಆಸ್ತಿ ಅಲ್ಲ, ಇದು ದೇಶದ ಆಸ್ತಿಯಾಗಿದೆ. ಆ ಆಶ್ರಮದ ಪರವಾಗಿ ನಮ್ಮ ಸರ್ಕಾರ ನಿಂತಿದೆ ಎಂದರು.

ಮೈಸೂರಿನ ಇತಿಹಾಸ ಕೇವಲ ನಾಡಿನ ಇತಿಹಾಸವಲ್ಲ, ಅದು ವಿಶ್ವಮಾನ್ಯವಾದದ್ದು. 1892ರಲ್ಲಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ್ದಾಗ, ಅಂದಿನ ಮಹಾರಾಜರಾದ ಶ್ರೀ ಚಾಮರಾಜ ಒಡೆಯರ್ ಅವರು ಸ್ವಾಮೀಜಿಯವರನ್ನು ಆತ್ಮೀಯವಾಗಿ ಸತ್ಕ-ರಿಸಿದ್ದರು. ಅಷ್ಟೇ ಅಲ್ಲದೆ, 1893ರಲ್ಲಿ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಅವರಿಗೆ ಪ್ರೋತ್ಸಾಹ ಹಾಗೂ ಆರ್ಥಿಕ ಬೆಂಬಲವನ್ನು ನೀಡಿದ್ದರು. ಅಂದು ಚಿಕಾಗೋದಲ್ಲಿ 'ಅಮೆರಿಕದ ನನ್ನ ಸಹೋದರ, ಸಹೋದರಿಯರೇ..' ಎಂದು ಮೊಳಗುವ ಮೂಲಕ ಭಾರತದ ಕೀರ್ತಿಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸಲು ವಿವೇಕಾನಂದರಿಗೆ ನಮ್ಮ ಮೈಸೂರು ಮಹಾರಾಜರು ಬೆನ್ನೆಲುಬಾಗಿ ನಿಂತಿದ್ದರು ಎಂಬುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ ಎಂದರು.

### ವಿವೇಕ ಸ್ಮಾರಕ ಉದ್ಘಾಟಿಸಿದ ಪ್ರಧಾನಿ ಮೋದಿ



ಮೈಸೂರು: ಸಾಂಸ್ಕೃತಿಕ ನಗರ ಮೈಸೂರಿಗೆ ಆಗಮಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ರಾಮಕೃಷ್ಣ ಆಶ್ರಮದಲ್ಲಿ ವಿವೇಕಾ ಸ್ಮಾರಕ(ಸ್ವಾಮಿ ವಿವೇಕಾನಂದ ಸಾಂಸ್ಕೃತಿ-ಕ ಯುವ ಕೇಂದ್ರ)ವನ್ನು ಉದ್ಘಾಟಿಸಿದರು. ಬಳಿಕ ಆಶ್ರಮದಲ್ಲೇ ಕೆಲಹೊತ್ತು ಧ್ಯಾನ ಮಾಡಿದರು. ಸುಮಾರು 45 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸ್ವಾಮಿ ವಿವೇಕಾನಂದ ಸ್ಮಾರಕ ಹಾಗೂ ಸಾಂಸ್ಕೃತಿಕ ಯುವ ಕೇಂದ್ರವನ್ನು ಪ್ರಧಾನಿ ಮೋದಿ ಅವರು ಇಂದು ಮಧ್ಯಾಹ್ನ ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ರಾಮಕೃಷ್ಣ ಆಶ್ರಮದ ಆವರಣದಲ್ಲಿ ಗಿಡವೊಂದನ್ನು ನೆಟ್ಟರು

# ಕೃಷಿ ಹೊಂಡ ಕೈಬಿಟ್ಟ ಕೇಂದ್ರ ಸರ್ಕಾರದ ಬಗ್ಗೆ ರೈತರ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಇಲಾಖೆ ಮೂಲಕ ಅನುಷ್ಠಾನವಾಗುತ್ತಿದ್ದ ಕೃಷಿ ಹೊಂಡಗಳ ನಿರ್ಮಾಣಕ್ಕೆ ಕೇಂದ್ರ ಸರಕಾರ ಕೊಕ್ಕೆ ಹಾಕಿದೆ.

ತೋಟಗಾರಿಕೆ ಬೆಳೆಗಳ ಉತ್ತೇಜನ ಮಳೆ ನೀರು ಸಂರಕ್ಷಣೆಗಾಗಿ ಕೃಷಿ ಹೊಂಡ ನಿರ್ಮಿಸಲು ಈ ಯೋಜನೆಯಡಿ ರೈತ-ರಿಗೆ ಸಿಗುತ್ತಿದ್ದ ಸಬ್ಸಿಡಿ ಪ್ರಸಕ್ತ ಸಾಲಿನಿಂದ ನಿಲ್ಲಿಸಿದೆ. ಸಾಮಾನ್ಯ ವರ್ಗದ ರೈತರಿಗೆ ಶೇ 80 ಹಾಗೂಎಸ್ಸಿ ಎಸ್ಟಿ ವರ್ಗದ ರೈತರಿಗೆ ಶೇ 90 ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಆದ-ರೀಗ ಕೃಷಿ ಹೊಂಡ ನಿರ್ಮಾಣ ಕಾರ್ಯದ ಅಂಶವನ್ನೇ ಕೈಬಿಟ್ಟು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರಕಾರ ಮಾರ್ಗಸೂಚಿಗಳನ್ನು ಹೊರಡಿಸಿರುವದು ಅನ್ನದಾತರ ಅಕ್ರೋಶಕ್ಕೆ ಕಾರಣವಾಗಿದೆ.

ಕಳೆದ ವರ್ಷ ತಾಲೂಕಿನಲ್ಲಿ 5 ಕ್ಕೂ ಹೆಚ್ಚು ಕೃಷಿ ಹೊಂಡಗಳು ಇದೇ ಯೋಜನೆಯಡಿ ನಿರ್ಮಾಣವಾಗಿವೆ. ಒಂದು ಕೃಷಿ ಕೊಂಡಕ್ಕೆ 4 ಲಕ್ಷ ರೂ ವರೆಗೆ ಖರ್ಚಾಗಲಿದ್ದು ಕೇಂದ್ರ ಸರಕಾರ ಈ ಕೃಷಿ ಹೊಂಡಗಳಿಗೆ ಸಬ್ಸಿಡಿ ಕೊಡುತ್ತಿದ್ದರಿಂದ ರೈತರು ಮುಂದೆ ಬರುತ್ತಿದ್ದರು.

ತಾಲೂಕಾವಾರು ವಾರ್ಷಿಕ ಒಂದು ಕೋಟಿ ರೂ ವರೆಗೆ ಕೃಷಿ ಹೊಂಡ ನಿರ್ಮಾಣ-ಕ್ಕೆ ಅನುದಾನ ಕೊಡಲಾಗುತ್ತಿತ್ತು. ಕೃಷಿ ಹೊಂಡ ನಿರ್ಮಾಣ ಕಾರ್ಯ ಮುಂದುವರೆಯುತ್ತದೆ ಎಂದುಕೊಂಡು ತಾಲೂಕಿನಲ್ಲಿ ಅಧಿಕಾರಿಗಳು ಈ ವರ್ಷವೂ ತೋಟಗಾರಿಕೆ ಬೆಳೆಗಾರರಿಗೆ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ಹೇಳಿದ್ದಾರೆ. ರೈತರು ಸ್ವಂತ ಖರ್ಚಿನಲ್ಲಿ ಕೃಷಿ ಹೊಂಡ ನಿರ್ಮಿಸಿದ್ದು ಇದೀಗ ತೋಟಗಾ-ರಿಕೆ ಇಲಾಖೆ ಕಚೇರಿಗಳಿಗೆ ಬಿಲ್ ಗಾಗಿ ಅಲೆದಾಡುತ್ತಿದ್ದಾರೆ. ಆದರೆ ಕೃಷಿ ವಿಕಾಸ ಯೋಜನೆಯಡಿ ಹೊಂಡದ ನಿರ್ಮಾಣದ ಅಂಶವನ್ನೇ ತೆಗೆದಿರುವದರಿಂದ ಅಧಿಕಾ-ರಿಗಳು ಅಡಕತ್ತರಿಯಲ್ಲಿ ಸಿಲುಕಿದ್ದಾರೆ. ಈ ಕುರಿತಂತೆ ತಾಲೂಕಿನಾದಂತ ತೋಟಗಾ-ರಿಕೆ ಇಲಾಖೆಯಡಿ ರೈತರು ಕೃಷಿ ಹೊಂಡ ನಿರ್ಮಾಣಕ್ಕೆ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಕೃಷಿ ವಿಕಾಸ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣಕ್ಕೆ ಅನುಕೂಲ ಕಲ್ಪಿಸಲು ರಾಜ್ಯ ತೋಟಗಾರಿಕೆ ಇಲಾಖೆಯಿಂದ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು ಈ ವರೆಗೆ ಅನುಮೋದನೆ ದೊರೆತಿಲ್ಲ ಎಂದು ತಿಳಿದಿಬಂದಿದೆ.



"ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೃಷಿ ಹೊಂಡಗಳ ನಿರ್ಮಾಣಕ್ಕೆ ಈ ವರೆಗೆ ಅನುದಾನ ಬಂದಿಲ್ಲ, ಅನುದಾನ ಬಂದರೆ ರೈತರಿಗೆ ನೀಡಲಾಗುತ್ತದೆ."

■ ಸತೀಶ ಬಡಿಗೇರ
ಸಹಾಯಕ ತೋಟಗಾರಿಕೆ
ಅಧಿಕಾರಿಗಳು, ಇಂಡಿ

## ವಿಜಯಪುರದಲ್ಲಿ ವ್ಯಸನಮುಕ್ತ ದಿನಾಚರಣೆ। ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಲ್ಲನಗೌಡ ಬಿರಾದಾರ ಕರೆ

# ಯುವಜನತೆ ದುಶ್ಚಟಗಳಿಂದ ದೂರವಿದ್ದು ಭವಿಷ್ಯ ರೂಪಿಸಿಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಯುವಕರು ಜೀವನದಲ್ಲಿ ಯಾವುದೇ ರೀತಿಯ ವ್ಯಸನಗಳಿಗೆ ಬಲಿಯಾಗದೆ ಆರೋಗ್ಯ, ಶಿಕ್ಷಣ ಹಾಗೂ ಉತ್ತಮ ಜೀವನ ಮೌಲ್ಯಗಳಿಗೆ ಆದ್ಯತೆ ನೀಡಿ ಸುಂದರ ಜೀವನ ರೂಪಿಸಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಲ್ಲನಗೌಡ ಬಿರಾದಾರ ಕರೆ ನೀಡಿದ್ದಾರೆ.


ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಶನಿವಾರ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮದಿನದ ಅಂಗವಾಗಿ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿ ಜೀವನವೇ ವ್ಯಕ್ತಿತ್ವ ನಿರ್ಮಾಣದ ಮುಖ್ಯಹಂತವಾಗಿದ್ದು, ಈ ಸಮಯದಲ್ಲಿ ತಂಬಾಕು, ಗುಟ್ಕಾ, ಮದ್ಯಪಾನದಂತಹ ದುಶ್ಚಟಗಳಿಗೆ ಬಲಿಯಾಗುವುದು ಆತಂಕಕಾರಿ. ಇವು ದೈಹಿಕ, ಮಾನಸಿಕ ಮತ್ತು ಕುಟುಂಬದ ನೆಮ್ಮದಿಯ ಮೇಲೆ ದುಷ್ಪರಿಣಾಮ ಬೀರುತ್ತವೆ. ಆದ-ರಿಂದ ಯುವಜನತೆ ಕ್ರೀಡೆ, ಯೋಗ, ವ್ಯಾಯಾಮ ಹಾಗೂ ಶಿಸ್ತಿನ ಜೀವನಶೈಲಿಯನ್ನು ಅಳವಡಿಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗಬೇಕು ಎಂದು ಅವರು ಕಿವಿಮಾತು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋತದಾರ ಮಾತನಾಡಿ, ಯುವಜನತೆ ದುಶ್ಚಟಗಳು ಮಾತ್ರವಲ್ಲದೆ ಮೊಬೈಲ್ ಫೋನ್ ವ್ಯಸನಗಳಿಂದಲೂ ದೂರವಿರಬೇಕು ಎಂದು ತಿಳಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಬಿ.ಬಿ.ಗಂಗನಹಳ್ಳಿ ಅವರು ಮಾತಾನಾಡಿ,ವಿದ್ಯಾರ್ಥಿಗಳು ಅಧ್ಯಯನಶೀಲತೆ ಮೈಗೂಡಿಸಿಕೊಂಡು,ದುಶ್ಚಟಗಳಿಗೆ ಬಲಿಯಾಗದೇ ಉತ್ತಮ ಬದುಕು ಕಟ್ಟಿಕೊಂಡು ಸಮಾಜಕ್ಕೆ ಮಾದರಿಯಾಗಿರಬೇಕು ಎಂದು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ವಿದ್ಯಾರ್ಥಿಗಳಿಗೆ ವ್ಯಸನಮುಕ್ತ ಜೀವನದ ಪ್ರತಿಜ್ಞಾವಿಧಿ ಬೋಧಿಸಿ, ದೈಹಿಕ ಮತ್ತು ಮಾನಸಿಕವಾಗಿ ದೃಢವಾಗಿರುವ ಯುವಕರೇ ಸಮಾಜಕ್ಕೆ ಮಾದರಿಯಾಗುತ್ತಾರೆ ಎಂದರು.

ವಿಶೇಷ ಉಪನ್ಯಾಸ ನೀಡಿದ ಮನೋವೈದ್ಯ ಡಾ. ಮಂಜುನಾಥ ಮಸಳಿ ಅವರು ಮಾದಕ ವ್ಯಸನಗಳು ದೇಹ, ಮೆದುಳು ಹಾಗೂ ಕುಟುಂಬದ ಮೇಲುಂಟು ಮಾಡುವ ಪರಿಣಾಮಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ವಿವರಿಸಿ, ಯಾವುದೇ ವ್ಯಸನದ ಆರಂಭವನ್ನು ತಡೆಯುವುದೇ ಅದರಿಂದ ಮುಕ್ತರಾಗುವ ಅತ್ಯುತ್ತಮ ಮಾರ್ಗ ಎಂದು ಮನವರಿಕೆ ಮಾಡಿಕೊಟ್ಟರು. ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ, ಜಿಲ್ಲಾ ಪಂಚಾಯತಿಯ ಸಹಾಯಕ ನಿರ್ದೇಶಕ ಡಿ.ಬಿ.ಮೆಂದಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಬೋವಿ, ಕಾಲೇಜಿನ ಉಪನ್ಯಾಸಕರಾದ ಎಸ್ ಐ ಸುರಪೂರ,ಹಣಮಂತ ಪೂಜಾರಿ,ಸಿ.ಎಸ್ ಪೂಜಾರಿ,ಎಸ್ ಐ ಸವಳಿ,ಎಸ್.ಬಿ ಕಲ್ಯಾಣಿ, ಜೆ.ಎಂ ಸಾಲೋಟಗಿ,ಎಸ್.ಪಿ ಧನ್ಯಾಳ ಸಂಗಮೇಶ ತೇಲಿ,ವಾರ್ತಾ ಇಲಾಖೆಯ ವಿಜಯಕೃಷ್ಣ, ವೈಷ್ಣವಿ ಭಗವತಿ,ಮಿಥ-ನ ಬನಸೋಡೆ,ನಾಗರಾಜ ಸಾಗರ,ರತ್ನಾಂಜಲಿ ವಾಲೀಕಾರ, ಲಕ್ಷ್ಮಣ ಸೇರಿದಂತೆ ಭಿಮರಾಯ ಜಿಗಜಿಣಗಿ, ಸೋಮನಗೌಡ ಕಲ್ಲೂರ ವಿವಿಧ ಇಲಾಖೆಗಳ ಅಧಿಕಾ-ರಿಗಳು, ಸಿಬ್ಬಂದಿ, ಕಾಲೇಜಿನ ಪ್ರಾಂಶುಪಾಲರು, ಶಿಕ್ಷಕರು, ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





ಕಲಬುರಗಿ: ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ನಗರದ ಡಾ.ಎಸ್.ಎಂ.ಪಂಡಿತ್ ರಂಗ ಮಂದಿರದಲ್ಲಿ ಹಮ್ಮಿಕೊಂಡಿದ್ದ ನಾಡೋಜ ನ್ಯಾ.ಡಾ.ಶಿವರಾಜ ವಿ.ಪಾಟೀಲರು ರಚಿಸಿದ"ಮುಂಜಾವಿಗೊಂದು ನುಡಿ ಕಿರಣ ದರ್ಶನ"ಯುವ ವಿದ್ಯಾರ್ಥಿಳ ವ್ಯಕ್ತಿತ್ವ ವಿಕಸನಕ್ಕಾಗಿ 9 ದಿನಗಳ ವಿಶೇಷ ಉಪನ್ಯಾಸದ ಸಮಾರೋಪ ಸಮಾರಂಭ ಮತ್ತು ಪ್ರಥಮ ಪಿಯು ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ದೇವದಾಸ್ ಅವರು ಉದ್ಘಾಟಿಸಿದರು. ಮುದಗಲ್–ತಿಮ್ಮಾಪುರ ಮಹಾಂತೇಶ್ವರ ಮಠದ ಮಹಾಂತ ಸ್ವಾಮಿಗಳು, ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಎಂ.ಪಾಟೀಲ, ಪ್ರೊ.ಚನ್ನಾರಡ್ಡಿ ಪಾಟೀಲ, ಅಭಿಷೇಕ, ಚನ್ನಾರಡ್ಡಿ ಪಾಟೀಲ, ಪ್ರಶಾಂತ ಕುಲಕರ್ಣಿ, ವಿನೂತಾ ಆರ್.ಬಿ., ಪ್ರಭುಗೌಡ, ಕರುಣೇಶ ಹಿರೇಮಠ, ಗುರುರಾಜ ಇದ್ದರು.

# ಆನಂದ ಆಶ್ರಮದಲ್ಲಿ ಗುರುಪೂರ್ಣಿಮಾ

ಕಲಬುರಗಿ: ಖಣದಾಳ ಗ್ರಾಮದ ಆನಂದ ಆಶ್ರಮದಲ್ಲಿ ಪೂಜ್ಯ ಹುಣಚೇರಾಯಲಿಂಗ ಮಹಾರಾಜರು ಹಾಗೂ ಪೂಜ್ಯ ಮಾತೋಶ್ರೀ ಭೀಂಬಾಯಿ ಅವರ ಪವಿತ್ರ ಪಾದಪೂಜೆಯು ಅತ್ಯಂತ ಭಕ್ತಿ, ಶ್ರದ್ಧೆ ಹಾಗೂ ವೈಭವದಿಂದ ಗುರು ಪೂರ್ಣಿಮಾ ಮಹೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಗುರುಪೂಜೆ, ಪಾದಪೂಜೆ, ವಿಶೇಷ ಪೂಜೆ, ಪ್ರವಚನ ,ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಗಳು ನೆರವೇರಿದವು. ಮಹಾನಂದ ಹಾಗೂ ಶಿವಲಿಂಗಪ್ಪ ಪೂಜಾರಿ ಬಳವಾಡ ಮತ್ತು ಭಾಗ್ಯಶ್ರೀ ಹಾಗೂ ಹೇಮಂತ ಕನ್ನಡಗಿ ದಂಪತಿಗಳು ಹಾಗೂ ನೂರಾರು ಗುರುಭಕ್ತರು ಭಾಗವಹಿಸಿ ಪಾದಪೂಜೆ ಮಾಡಿ ಸದ್ಗುರುಗಳ ದಿವ್ಯ ಆಶೀರ್ವಾದವನ್ನು ಪಡೆದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲ್ಲೂಕಿನ ದೇವಲಗಾಣಗಾಪುರ ಗ್ರಾಮದ ಕೋಲಿ ಸಮಾಜದ ಯುವಕ ದತ್ತು ಖರ್ಚಿ ಮೇಲೆ ನಡೆದ ಮಾರಣಾಂತಿಕ ಹಲ್ಲೆಯನ್ನು ಖಂಡಿಸಿ ಮತ್ತು ಪರಿಹಾರಕ್ಕಾಗಿ ಆಗ್ರಹಿಸಿ ಜಿಲ್ಲಾ ಕೋಲಿ–ಕಬ್ಬಲಿಗ ಸಮನ್ವಯ ಸಮಿತಿ ವತಿಯಿಂದ ನಗರದಲ್ಲಿ ಇಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.



# ಬಸ್ ಪಲ್ಟಿ: ಐವರಿಗೆ ಸಣ್ಣಪುಟ್ಟ ಗಾಯ


ಕಲಬುರಗಿ:ಕಮಲಾಪುರತಾಲೂಕಿನಮಹಾಗಾಂವ್ ಪಟ್ಟಣದ ಸಮೀಪ ಕೆಕೆಆರ್‌ಟಿಸಿ ಬಸ್ ಪಲ್ಟಿಯಾಗಿ

ಚಾಲಕ, ನಿರ್ವಾಹಕ ಸಹಿತ ಐವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಬೀದರ್‌ನಿಂದ ಕಲಬುರಗಿಗೆ ಬರುತ್ತಿದ್ದ ಈ ಕೆಕೆಆರ್‌ಟಿಸಿ ಬಸ್ಸು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿ ತಗ್ಗುಗುಂಡಿಯಲ್ಲಿ ಪಲ್ಟಿಯಾಗಿದೆ.

ಬಸ್‌ನಲ್ಲಿ ಕೇವಲ ಐವರು ಪ್ರಯಾಣಿಕರು ಮಾತ್ರ ಇದ್ದರು ಎಂದು ಗೊತ್ತಾಗಿದೆ.ಮಹಾಗಾಂವ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ಜಲ, ಭಾಷಾ ವಿವಾದಗಳ ನಡುವೆಯೂ ಸಹೋದರ ಭಾವ ಅಬಾಧಿತ ಎಂಎಲ್‌ಸಿ ಬಸವರಾಜ ಪಾಟೀಲ್



ಆಳಂದ: ಮಹಾರಾಷ್ಟ್ರ ರಾಜ್ಯ ವಿಧಾನ ಪರಿಷತ್ ಸದಸ್ಯ ಹಾಗೂ ಮಾಜಿ ಸಚಿವ ಬಸವರಾಜ ಪಾಟೀಲ ಅವರು ಎಂಎಲ್‌ಸಿಯಾಗಿ ಆಯ್ಕೆಯಾದ ಬಳಿಕ ಪ್ರಥಮ ಬಾರಿಗೆ ಆಳಂದ ಪಟ್ಟಣದ ತಮ್ಮ ಕುಟುಂಬಸ್ಥರ ನಿವಾಸಕ್ಕೆ ಆಗಮಿಸಿದರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ–ಮಹಾರಾಷ್ಟ್ರ ನಡುವಿನ ಭಾಷೆ ಮತ್ತು ಜಲ ವಿವಾದಗಳ ಬಗ್ಗೆ ಸ್ಪಷ್ಟ ನಿಲುವು ವ್ಯಕ್ತಪಡಿಸಿದರು. "ಮೊದಲು ಭಾರತೀಯರು" ಎಂಬ ಸಂದೇಶ:

"ಕರ್ನಾಟಕ–ಮಹಾರಾಷ್ಟ್ರ ಭಾಷೆ ಮತ್ತು ಜಲವಿವಾದ ಯಾವುದೂ ಸಲ್ಲದು. ನಾವು ಮೊದಲು ಭಾರತೀಯರು ಎಂಬ ಭಾವನೆಯೊಂದಿಗೆ ಸಾಗಬೇಕಾಗಿದೆ. ಎರಡೂ ರಾಜ್ಯಗಳ ಬಾಂಧವ್ಯವನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ" ಎಂದು ಪಾಟೀಲ ಹೇಳಿದರು. ತಮ್ಮ ಕುಟುಂಬದ ಬೇರುಗಳು ಆಳಂದದಲ್ಲಿವೆ ಎಂದು ಭಾವುಕರಾದ ಅವರು, "ನಮ್ಮ ಪೂರ್ವಜರು ಇಲ್ಲಿದ್ದರು. ಈಗಲೂ ನಮ್ಮ ಸಂಬಂಧಿಕರು ಇಲ್ಲಿದ್ದಾರೆ. ನಾವು ಬಂದಾಗೊಮ್ಮೆ ಇಲ್ಲಿನ ಜನರು ತೋರುವ ಪ್ರೀತಿ ವಿಶ್ವಾಸವನ್ನು ಎಂದಿಗೂ ಮರೆಯಲಾಗದು" ಎಂದು ನುಡಿದರು. ಕೇಂದ್ರ, ರಾಜ್ಯ ಸರ್ಕಾರಗಳ ಆಡಳಿತ ಶ್ಲಾಘನೆ:

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ನೇತೃತ್ವದಲ್ಲಿ ಉತ್ತಮ ಆಡಳಿತ ನಡೆಯುತ್ತಿದೆ ಎಂದು ಅಭಿಪ್ರಾಯಪಟ್ಟ ಪಾಟೀಲ, ಮುಂಬರುವ ದಿನಗಳಲ್ಲಿ ಕರ್ನಾಟಕದಲ್ಲೂ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುವ ವಿಶ್ವಾಸ ವ್ಯಕ್ತಪಡಿಸಿದರು. "ಬಿಜೆಪಿಯೊಂದಿಗೆ ಇರುವುದೇ ದೇಶದ ಪ್ರಗತಿಗೆ ದಾರಿ ಎಂದು ನಾನೊಬ್ಬ ಶಾಸಕನಾಗಿ ಹೇಳುತ್ತಿದ್ದೇನೆ" ಎಂದರು.

ಮಹಾರಾಷ್ಟ್ರದ ವಾಣಿಜ್ಯೀಕರಣಕ್ಕೆ ಅನ್ಯಾಯವಾಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ದೊಡ್ಡ ದೊಡ್ಡ ಕಂಪನಿಗಳು, ಉದ್ಯಮಗಳು ಸ್ಥಾಪನೆಯಾಗುತ್ತಿದ್ದು, ಮಹಾರಾಷ್ಟ್ರ ಕೈಗಾರಿಕಾ ರಂಗದಲ್ಲಿ ಬಲಿಷ್ಠವಾಗಿ ಬೆಳೆಯುತ್ತಿದೆಯೇ ಹೊರತು ಅನ್ಯಾಯವಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಯುವ ಸಮುದಾಯಕ್ಕೆ ಆಶ್ವಾಸನೆ, ನೀಟ್ ವಿವಾದದ ಬಗ್ಗೆ ಸಮರ್ಥನೆ ಪ್ರಧಾನಿ ಮತ್ತು ಮುಖ್ಯಮಂತ್ರಿಗಳ ಸರ್ಕಾರಗಳು ಯುವಕರ ಭವಿಷ್ಯಕ್ಕಾಗಿ ಶ್ರಮಿಸುತ್ತಿವೆ ಎಂದು ಹೇಳಿದ ಪಾಟೀಲ, ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಿಂದ ಪಕ್ಷಕ್ಕೆ ಹಿನ್ನಡೆಯಾಗಿದೆ ಎಂಬ ಆರೋಪವನ್ನು ತಳ್ಳಿಹಾಕಿದರು. "ಕೇಂದ್ರ ಸರ್ಕಾರ ಉತ್ತಮ ನಿರ್ಣಯ ತೆಗೆದುಕೊಂಡಿದೆ. ಸಂಸತ್ತಿನಲ್ಲಿ ಉತ್ತಮ ಚರ್ಚೆ ನಡೆಯುತ್ತಿದ್ದು, ಸೂಕ್ತ ಕಾಯ್ದೆ ರೂಪಿಸಲಾಗುತ್ತಿದೆ. ಶಿಕ್ಷಣ ಕ್ಷೇತ್ರದ ವಿಷಯದಲ್ಲಿ ಸರ್ಕಾರ ಜಾಗೃತವಾಗಿದ್ದು, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಬಗ್ಗೆ ಗಂಭೀರವಾಗಿದೆ" ಎಂದು ವಿವರಿಸಿದರು.

ರೈತರ ಸಾಲಮನ್ನಾ: ಐತಿಹಾಸಿಕ ನಿರ್ಣಯ ಮಹಾರಾಷ್ಟ್ರ ಸರ್ಕಾರ ರೈತರ ಪರವಾಗಿ 35 ಸಾವಿರ ಕೋಟಿ ರೂಪಾಯಿ ಸಾಲಮನ್ನಾ ಮಾಡಿರುವುದು ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಆಗಿರುವ ಬೃಹತ್ ನಿರ್ಣಯ ಎಂದು ಪಾಟೀಲ ಬಣ್ಣಿಸಿದರು. ಈ ಕ್ರಮದಿಂದ ಮಹಾರಾಷ್ಟ್ರದ ಸಮಸ್ತ ರೈತರಿಗೂ ಅನುಕೂಲವಾಗಿದೆ ಎಂದು ಅವರು ಹೇಳಿದರು.

ಪಾಟೀಲರ ಸಹೋದರ ಆಗಿರುವ ಪುರಸಭೆ ಮಾಜಿ ಅಧ್ಯಕ್ಷ ವಿಠ್ಠಲರಾವ್ ಪಾಟೀಲ, ಪುತ್ರ ನ್ಯಾಯವಾದಿ ಬಿ.ವಿ.ಪಾಟೀಲ, ಚನ್ನಬಸವ ಪಾಟೀಲ, ಬಿಜೆಪಿ ಜಿಲ್ಲಾ ವಕ್ತಾರ ಸಂಜಯ ಮಿಸ್ಕಿನ್, ಮಹೇಶ ಸೂರೆ, ಶರಣಗೌಡ ಪಾಟೀಲ, ಪಿಎಸ್‌ಡಿ ಮಾಜಿ ಅಧ್ಯಕ್ಷ ಹಣಮಂತ ಕಾಬಡೆ, ನಿಜಲಿಂಗಪ್ಪ ಕೊರಳ್ಳಿ, ಸಂಜಯ ನಾಯಕ, ಡಾ. ಸಾಗರ ಕಟಂಬಲೆ, ಉದ್ಯಮಿ ವಿಶಾಲ ಗಾಂಧಿ, ಡಾ. ಯೋಗೇಶ ಬಂಡಗಾರ, ಮಾಣಿಕ ಜಾಧವ, ಪುರಸಭೆ ಮಾಜಿ ಅಧ್ಯಕ್ಷ ಅಮ್ಜದ್ ಅಲಿ ಖಜರ್ಗಿ, ಮುಸ್ತಾಫ್, ಸೇರಿದಂತೆ ಮುಸ್ಲಿಂ ಮುಖಂಡರು ಒಳಗೊಂಡು ವಿವಿಧ ಸಮುದಾಯದ ನಾಗರಿಕರು ಪಾಟೀಲ ಅವರನ್ನು ಸನ್ಮಾನಿಸಿದರು.

# ಶರಣಬಸವ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಕೌಶಲ್ಯ ವೃದ್ಧಿಗೆ ಡ್ರೋನ್ ಪ್ರಯೋಗಾಲಯ ಸ್ಥಾಪನೆ




ಕಲಬುರಗಿ: ಇಂಜಿನಿಯರಿಂಗ್ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಶರಣಬಸವ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಬ್ಯಾಂಕನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಡಿ 12.98 ಲಕ್ಷ ರೂಪಾಯಿಗಳ ನೆರವಿನಿಂದ ಅತ್ಯಾಧುನಿಕ ಡ್ರೋನ್ ಪ್ರಯೋಗಾಲಯವನ್ನು ಶೀಘ್ರದಲ್ಲೇ ಸ್ಥಾಪಿಸಲಾಗುತ್ತಿದೆ. ಶರಣಬಸವೇಶ್ವರ ಸಂಸ್ಥಾನದ ದಾಸೋಹ ಮಹಾಮನೆಯಲ್ಲಿ ಬುಧವಾರದಂದು ನಡೆದ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ, ಕರ್ನಾಟಕ ಬ್ಯಾಂಕನ ಸಹಾಯಕ ಮಹಾಪ್ರಬಂಧಕರಾದ ಮಲ್ಲನಗೌಡ ಬಿರಾದಾರ ಅವರು 12.98 ಲಕ್ಷ ರೂಪಾಯಿಗಳ ಚೆಕ್ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ. ದಾಕ್ಷಾಯಿಣಿ ಅವ್ವಾಜಿ ಹಾಗೂ ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಅವರಿಗೆ ಅಧಿಕೃತವಾಗಿ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ಕುಲಸಚಿವರಾದ ಡಾ. ಲಕ್ಷ್ಮೀ ಪಾಟೀಲ ಮಾಕಾ ಸೇರಿದಂತೆ ವಿಶ್ವವಿದ್ಯಾಲಯದ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ಬ್ಯಾಂಕನ ಮುಖ್ಯ ವ್ಯವಸ್ಥಾಪಕರಾದ ಶಶಿಕಿರಣ, ಕ್ಲಸ್ಟರ್ ಮುಖ್ಯಸ್ಥ ಹಾಗೂ ವ್ಯವಸ್ಥಾಪಕರಾದ ಕಾಲೋ ಕುಲಕರ್ಣಿ, ಮುಖ್ಯ ವ್ಯವಸ್ಥಾಪಕರಾದ ಜಿ. ಸೋಮಶೇಖರ್ ಹಾಗೂ ಶಾಖಾ ವ್ಯವಸ್ಥಾಪಕರಾದ ಆರ್.ಡಿ. ಗುರುರಾಜ ಸಹ ಉಪಸ್ಥಿತರಿದ್ದರು.

ಸಂಪೂರ್ಣ ಸಜ್ಜಿತ ಡ್ರೋನ್ ಪ್ರಯೋಗಾಲಯವನ್ನು ಸ್ಥಾಪಿಸಲು ಕರ್ನಾಟಕ ಬ್ಯಾಂಕ್ ತನ್ನ ಸಿಎಸ್‌ಆರ್ (ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ) ಯೋಜನೆಯಡಿ ನೀಡಿರುವ 12.98 ಲಕ್ಷ ರೂಪಾಯಿಗಳ ಅನುದಾನಕ್ಕಿಂತ ಹೆಚ್ಚಿನ ಹಣ ವೆಚ್ಚವಾಗಲಿರುವುದರಿಂದ, ಉಳಿದ ಅಗತ್ಯ ವೆಚ್ಚವನ್ನು ಶರಣಬಸವ ವಿಶ್ವವಿದ್ಯಾಲಯವೇ ಭರಿಸಿ, ತನ್ನ ಮುಖ್ಯ ಆವರಣದಲ್ಲಿ ಅತ್ಯಾಧುನಿಕ ಡ್ರೋನ್ ಪ್ರಯೋಗಾಲಯವನ್ನು ಸ್ಥಾಪಿಸಲಿದೆ. ಡ್ರೋನ್ ಪ್ರಯೋಗಾಲಯ ಸ್ಥಾಪನೆಗಾಗಿ ಬ್ಯಾಂಕನ ಸಿಎಸ್‌ಆರ್ ನಿಧಿಯಿಂದ ಅನುದಾನ ಒದಗಿಸಿದ ಹಿನ್ನೆಲೆಯಲ್ಲಿ ಡಾ. ದಾಕ್ಷಾಯಿಣಿ ಅವ್ವಾಜಿ ಅವರು ಕರ್ನಾಟಕ ಬ್ಯಾಂಕನ ಅಧಿಕಾರಿಗಳನ್ನು ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು.

ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಲಿರುವ ಡ್ರೋನ್ ಪ್ರಯೋಗಾಲಯವು ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಸಂಶೋಧನೆ ಮತ್ತು ನವೋದ್ಯಮ, ಕೌಶಲ್ಯಾಭಿವೃದ್ಧಿ ಹಾಗೂ ಪಠ್ಯಕ್ರಮ ಆಧಾರಿತ ತಾಂತ್ರಿಕ ತರಬೇತಿಗೆ ಮಹತ್ತರ ಕೊಡುಗೆ ನೀಡಲಿದೆ. ಅತ್ಯಾಧುನಿಕ ತಾಂತ್ರಿಕ ಪ್ರಯೋಗಾಲಯಗಳೊಂದಿಗೆ ಡ್ರೋನ್ ಪ್ರಯೋಗಾಲಯವು ತಂತ್ರಜ್ಞಾನ ಶಿಕ್ಷಣದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುವುದರ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿಜೀವನಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಿದೆ.

ಈ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆಧಾರಿತ ಡಿಜಿಟಲ್ ಸ್ವಯಂಚಾಲನಾ ತಂತ್ರಜ್ಞಾನದಲ್ಲಿನ ಪ್ರಾಯೋಗಿಕ ಬೆಳವಣಿಗೆಗಳನ್ನು ಅರಿತುಕೊಳ್ಳಲಿದ್ದು, ಮಾನವರಹಿತ ವೈಮಾನಿಕ ವಾಹನಗಳ ಪರಿಕಲ್ಪನೆ, ಕಾರ್ಯವಿಧಾನ ಹಾಗೂ ಅದಕ್ಕೆ ಸಂಬಂಧಿಸಿದ ಅಲ್ಗಾರಿದಗಳ ಕುರಿತು ಪ್ರಾಯೋಗಿಕ ಜ್ಞಾನವನ್ನು ಪಡೆಯಲಿದ್ದಾರೆ. ಈ ಡ್ರೋನ್ ಪ್ರಯೋಗಾಲಯದಿಂದ, ಆರಂಭಿಕಹಂತದಲ್ಲಿಯೇಕಂಪ್ಯೂಟರ್‌ಸೈನ್ಸ್‌ಇಂಜಿನಿಯರಿಂಗ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅಂಡ್ ಮಷಿನ್ ಲರ್ನಿಂಗ್, ಎಲೆಕ್ಟ್ರಾನಿಕ್ಸ್‌ಅಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್‌ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅಂಡ್ ಡೇಟಾ ಸೈನ್ಸ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್ ಹಾಗೂ ಎನರ್ಜಿ ಇಂಜಿನಿಯರಿಂಗ್ ಸೇರಿದಂತೆ ವಿವಿಧ ವಿಭಾಗಗಳ 1,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೇರ ಪ್ರಯೋಜನ ಪಡೆಯಲಿದ್ದಾರೆ.


■ ಉದಯರಶ್ಮಿ ದಿನಪತ್ರಿಕೆ


# ಸ್ನೇಹತ್ವದ ಮಧುರ ಬಾಂಧವ್ಯ ಬೆಸೆಯಲಿ..

## ಇಂದು (ಆಗಸ್ಟ-2, ರವಿವಾರ) "ವಿಶ್ವ ಸ್ನೇಹಿತರ ದಿನ" ದ ಪ್ರಯುಕ್ತ ಈ ವಿಶೇಷ ಲೇಖನ

"ಓ ಗೆಳೆಯ, ಜೀವದ ಗೆಳೆಯ, ನಿಂಗೆ ಶಾನೆ ಕ್ವಾಪ ಕಣೋ, ಕ್ವಾಪಕೂ ಒಂದು ಕೈ ಪ್ರೀತಿ ಜಸ್ತಿ ಕಣೋ.. ಕುಚುಕು ಕುಚುಕು, ನೀನು ಚಡ್ಡಿ ದೋಸ್ತ ಕಣೋ ಕುಚುಕು, ಜೀವ ದಿನಾದಾಸ್ತಿ ಕಣೋ ಕುಚುಕು.. ಎಂಬ ಚಲನಚಿತ್ರದ ಹಾಡುಗಳನ್ನು ಕೇಳಿರಬಹುದು. ಇದರಿಂದ ಪ್ರತಿಯೊಬ್ಬರಿಗೆ ತಮ್ಮ ಹೃದಯದ ಭಾವನೆಗಳನ್ನು ಹಂಚಿಕೊಳ್ಳಲು ಸ್ನೇಹಿತರು ಬೇಕು. ನಾವು ಮಾಡುವ ತಪ್ಪುಗಳನ್ನು ತಿದ್ದಿ–ತೀಡಿ, ಕನಸುಗಳನ್ನು ಸಾಕಾರಗೊಳಿಸಲು ಮತ್ತು ಪ್ರತಿಯೊಂದು ಸಾಧನೆಯ ಹಿಂದೆ ಪ್ರೋತ್ಸಾಹಕನಾಗಿ ನಿಂತಿರುವವನೇ ಗೆಳೆಯ ಅಥವಾ ಸ್ನೇಹಿತ. ಆದ್ದರಿಂದ ಪ್ರತಿಯೊಬ್ಬರು ಇಡೀ ಜಗತ್ತನೇ ಗೆದ್ದಿರುವ ಎಲ್ಲ ಸಂಬಂಧಗಳನ್ನು ಮೀರಿ ನಿಂತಿರುವ ಮತ್ತು ಬಾಂಧವ್ಯ ಬೆಸೆಯುವ ಸುಮಧುರ ಸಂಬಂಧವೇ ಗೆಳೆತನ ಎಂದು ಹೇಳಬಹುದು.

ಅದಕ್ಕಾಗಿ ಸ್ನೇಹಿತರ ದಿನ ಎಂದರೆ ಕೇವಲ ಕೈಗೆ ಫ್ರೆಂಡ್ ಶಿಫ್ ಬ್ಯಾಂಡ್ ಕಟ್ಟುವುದು, ಗಿಫ್ಟ ನೀಡುವುದು, ಪಾರ್ಟಿ, ಮೋಜು–ಮಸ್ತಿ ಮಾಡಿ ಕೇಕ್ ಕತ್ತಸುವುದಲ್ಲ. ಬದಲಾಗಿ ನಿಜವಾಗಿ ಸ್ನೇಹಿತನ ಮನದ ಇಂಗಿತವನ್ನು ಅರಿತು ಬಿದ್ದಾಗ ಮೇಲೇಳುವಂತೆ ಬೆನ್ನು ತಟ್ಟಿ, ಸದಾ ಪ್ರೇರಣೆ ನೀಡುವ ಅಮರ ಪ್ರೇಮ ಸ್ನೇಹತ್ವದ ಸಂಕೇತವಾಗಬೇಕು ಮತ್ತು ಅರ್ಥಪೂರ್ಣವಾಗಬೇಕು. ಭಾರತದಲ್ಲಿ ಪ್ರತಿವರ್ಷ ಅಗಷ್ಟ ತಿಂಗಳ ಮೊದಲ ರವಿವಾರದಂದು (ಅಗಷ್ಟ 2) ವಿಶ್ವ ಸ್ನೇಹಿತರ ದಿನವನ್ನು ಆಚರಿಸಲಾಗುತ್ತದೆ.





ಸ್ನೇಹವು ಪ್ರೀತಿ–ನಂಬಿಕೆಯ ಪ್ರತಿ–ರೂಪವಾಗಬೇಕು:

ವಿಶ್ವದಲ್ಲಿ ಸ್ನೇಹದೆಲ್ಲೆಡೆ ಸ್ನೇಹತ್ವ ಮತ್ತು ಅದರ ಪ್ರಾಮುಖ್ಯತೆಯನ್ನು ಬಲಪಡಿಸುವ ಉದ್ದೇಶದಿಂದ ಮೊಟ್ಟಮೊದಲು ಜುಲೈ 30, 1958 ರಲ್ಲಿ ವರ್ಲ್ಡ ಫ್ರೆಂಡಶಿಫ್ ಕ್ರುಸೇಡ್‌ನಿಂದ ಈ ದಿನಾಚರಣೆಯ ಪ್ರಸ್ತಾಪಿಸಲಾಯಿತು. ಮುಂದೆ 2011 ರಲ್ಲಿ ವಿಶ್ವಸಂಸ್ಥೆಯು ಅಂತರಾಷ್ಟ್ರೀಯ ಸ್ನೇಹತ್ವ ದಿನವನ್ನು ಆಚರಿಸುವಂತೆ ಉತ್ತೇಜಿಸಿತು. ಗೆಳೆಯರ ಮಧ್ಯೆ ಶಾಂತಿ, ಪ್ರೀತಿ ಮತ್ತು ಪರಸ್ಪರ ನಂಬಿಕೆಯನ್ನು ಬೆಳೆಸುವುದು ಈ ದಿನದ ಆಚರಣೆಯ ಪ್ರಮುಖ ಉದ್ದೇಶವಾಗಿದೆ. ಯಾವುದೇ ಭಾಷೆ, ಸಂಸ್ಕೃತಿ ಮತ್ತು ಧರ್ಮಗಳ ಗಡಿಗಳನ್ನು ಮೀರಿ ನಿಲ್ಲುವ ಶಕ್ತಿ ಸ್ನೇಹಕ್ಕಿದೆ. ಈ ದಿನವು ಜಗತ್ತಿನಲ್ಲಿ ಶಾಂತಿ ನೆಲೆಸಲು ಸ್ನೇಹ ಮತ್ತು ಸಹೋದರತೆಯು ಅತ್ಯಗತ್ಯ ಎಂಬ ಸಂದೇಶವನ್ನು ಸಾರುತ್ತದೆ.



ಕಷ್ಟ–ಸುಖದಲ್ಲಿ ಸಹಭಾಗಿ ಮತ್ತು ಆಪದ್ಬಾಂಧವನಾಗುವ ಸ್ನೇಹಿತನಂತಿರಬೇಕು: ಸ್ನೇಹ ಮಾಡುವ ಮೊದಲು ಒಳ್ಳೆಯವರು ಕೆಟ್ಟವರು ಯಾರೆಂಬುದನ್ನು ಪರೀಕ್ಷಿಸಿ, ಒಳ್ಳೆಯ ಸಚ್ಚಾರಿತ್ರ್ಯ, ಸನ್ನಡತೆ, ಸದ್ಭಾವ, ಸಮಚಿತ್ತ ಮತ್ತು ಸದ್ವಿಚಾರದಂತಹ ಗುಣಗಳನ್ನು ಹೊಂದಿದ ಸ್ನೇಹಿತರ ಜೊತೆ ಸ್ನೇಹತ್ವ ಬೆಳೆಸಬೇಕು. ಸ್ನೇಹಿತರೆಂದರೆ ಕಷ್ಟ–ಸುಖಗಳಲ್ಲಿ ಸಹಭಾಗಿಯಾಗಿ ಸದಾ ನಮ್ಮ ಶ್ರೇಯಸ್ಸು ಬಯಸುವ ಮತ್ತು ಬಡವ–ಬಲ್ಲಿದರೆನ್ನದೇ ತನ್ನ ಗೆಳೆಯನನ್ನು ಪ್ರೀತಿಸುವ, ಪ್ರೋತ್ಸಾಹಿಸುವ, ಆಪದ್ಬಾಂಧವನಾಗಿ



ಸಹಾಯಹಸ್ತ ಚಾಚುವವನೇ ನಿಜವಾದ ಸ್ನೇಹಿತನಾಗುತ್ತಾನೆ.

ಸ್ನೇಹವೆಂದರೆ ಮರೆಯಲಾಗದ ಅನುಬಂಧ

ಸ್ನೇಹಿತರೆಂದರೆ ಕಷ್ಟಕಾಲದಲ್ಲಿ ಕುಟುಂಬದವರು, ಬಂಧು–ಬಳಗದವರು ಸಹಾಯಕ್ಕೆ ಬಾರದಿದ್ದರೂ ನಿಜವಾದ ಸ್ನೇಹಿತರು ನಮ್ಮೊಂದಿಗಿರುತ್ತಾರೆ. ಜೀವನದಲ್ಲಿ ಕುಗ್ಗಿದಾಗ ಭರವಸೆಯ ಬೆಳಕಾಗುತ್ತಾರೆ. ಸ್ನೇಹವು ರಕ್ತ ಸಂಬಂಧಕ್ಕಿಂತಲೂ ಮೀರಿ ಬೆಸೆಯುವ ಬಂಧ. ಸ್ನೇಹಿತರು ನಮ್ಮ ಜೀವನವನ್ನು ನಗು, ಸಂತೋಷ ಮತ್ತು ಮರೆಯಲಾಗದ ಸವಿ ನೆನಪುಗಳನ್ನು ತುಂಬುತ್ತಾರೆ. ನಾವು ಸ್ನೇಹಿತರೊಂದಿಗೆ ಕಳೆದ ಬಾಲ್ಯದ, ಶಾಲಾ–ಕಾಲೇಜಿನ ದಿನಗಳನ್ನು ಸವಿ ನೆನಪುಗಳನ್ನು ಮೆಲುಕು ಹಾಕುತ್ತಾ ಒಗ್ಗಟ್ಟಿನಿಂದ ಇರಬೇಕು. ದುರದೃಷ್ಟವಶಾತ್ ಇಂದು ಮೋಬೈಲ್, ವ್ಯಾಟ್ಸಪ್, ಫೇಸಬುಕ್ ನಂತಹ ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಸ್ನೇಹತ್ವದ ಬಾಂಧವ್ಯವು ಕೇವಲ ಕಾಟಾಚಾರಕ್ಕೆ ಹಾಯ್–ಬಾಯ್‌ಗೆ ಮಾತ್ರ ಸೀಮೀತವಾಗುತ್ತಿರುವದು ಕಳವಳಕಾರಿ ಸಂಗತಿ.

2026 ನೇಯ ವರ್ಷದ ಘೋಷವಾಕ್ಯ "ಸ್ನೇಹದ ಮೂಲಕ ಶಾಂತಿ ಮತ್ತು ಐಕ್ಯಮತ್ಯವನ್ನು ಉತ್ತೇಜಿಸುವುದು" ಈ ವರ್ಷದ ಧ್ಯೇಯವಾಕ್ಯವಾಗಿದೆ. ಆದ್ದರಿಂದ ಈ ಸ್ನೇಹ ದಿನದ ಕಲ್ಪನೆಯು ಸಮಾಜವನ್ನು ದ್ವೇಷ ಮತ್ತು ದೇಷದ ಸಂಕೋಲೆಯಿಂದ ಮುಕ್ತಗೊಳಿಸುವ ಪ್ರಬಲ ಉಪಕ್ರಮವೆಂದು ಪರಿಗಣಿಸಲಾಗಿದೆ. ಪರಾಕ್ರಮಿ ಅರ್ಜುನ ಮತ್ತು ಬಡಪಾಯಿ ಕುಚೇಲ ಇಬ್ಬರನ್ನೂ ಸಮನಾಗಿ ಆದರಿಸಿದ ಜಗತ್ತಿನ ಪ್ರಪ್ರಥಮ ಗೆಳೆಯ ಭಗವಾನ್ ಶ್ರೀಕೃಷ್ಣನ ಸ್ನೇಹತ್ವವು ನಮಗೆಲ್ಲ ಆದರ್ಶವಾಗಲಿ. ನಮ್ಮಲ್ಲಿ ಯಾವುದೇ ಜಾತಿ, ಮತ, ಪಂಥ, ಧರ್ಮ ಮತ್ತು ಜನಾಂಗವೆಂಬ ಭಾವ ತೊರೆದು ಎಲ್ಲರೊಂದಿಗೆ ಸ್ನೇಹತ್ವದಿಂದ ಬದುಕುವಂತಾಗಬೇಕು ಅಂದಾಗ ಮಾತ್ರ ಈ ವಿಶ್ವ ಸ್ನೇಹಿತ್ವ ದಿನದ ಆಚರಣೆ ನಿಜಕ್ಕೂ ಅರ್ಥಪೂರ್ಣವಾಗುವುದು.

ಲೇಖನ
– ಮಲ್ಲಪ್ಪ. ಸಿ.
ಖೊದ್ನಾಪೂರ
(ತಿಕೋಟಾ)
ವಿಜಯಪುರ



# ರಕ್ತಸಂಬಂಧ ಮೀರಿದ ಬಂಧವೇ ಸ್ನೇಹ

## ಇಂದು (ಆಗಷ್ಟ-2, ರವಿವಾರ) "ವಿಶ್ವ ಸ್ನೇಹಿತರ ದಿನ" ದ ಪ್ರಯುಕ್ತ ಈ ವಿಶೇಷ ಲೇಖನ



■ ಉದಯರಶ್ಮಿ ದಿನಪತ್ರಿಕೆ

ಸ್ನೇಹ ಎಂಬರೆಡಕ್ಷರ ಅಪಾರವಾದ ಅರ್ಥವನ್ನು ಹೊಂದಿದೆ. ಎಲ್ಲಿಯೋ ಹುಟ್ಟಿ ಎಲ್ಲಿಯೋ ಬೆಳೆದು

ಪರಸ್ಪರ ಪರಿಚಯವಾಗುತ ನಂಬಿಕೆಯ ಸೇತುವೆಯಡಿ

ಜನ್ಮ ತಾಳುವುದೇ ಸ್ನೇಹ. ದೇಹಗಳೆರದಾದರೂ ಜೀವಗಳು ಒಂದೇ. ಪ್ರೀತಿ ವಿಶ್ವಾಸಗಳೇ ಸ್ನೇಹದ ಉಸಿರು

ಮಾತಲ್ಲೇ ಆರಂಭವಾಗುತ ಗೆಳೆತನ ದಿನಗಳು ಕಳೆದಂತೆ ಆತ್ಮೀಯತೆಯನು ಬೆಸೆದು ಒಬ್ಬರಿಗೊಬ್ಬರು ಹಚ್ಚಿಕೊಂಡು ಬಿಟ್ಟಿರಲಾಗದಷ್ಟು ನಂಟು ಬೆಳೆಯುತ್ತದೆ.

ಜಾತಿಯ ಅರಿವಿಲ್ಲ. ಬಡವ ಶ್ರೀಮಂತನೆಂಬ ಬೇಧವಿಲ್ಲದೆ ಮನಸು ಮನಸುಗಳ ನಡುವೆ ಮಾತನಾಡುತಲೆ ಅಂತರಂಗದಿ ಕುಡಿಯೊಡೆಯುವ ಸ್ನೇಹ ಬಂಧನ. ಎಲ್ಲ ಬಂಧವನ್ನು ಮೀರಿದ ಅಗಣಿತ ಭಾವನೆಗಳ ಸಂಗಮದ ಬಾಂಧವ್ಯದ ಗಣಿಯಿದು. ಅರಿವಿನ ಆಲಯದಿ ಒಬ್ಬರಿಗೊಬ್ಬರನ್ನು ಬಿಟ್ಟುಕೊಡದೆ ರಹಸ್ಯವಾದ ಸುಖ ದುಃಖಗಳನ್ನು ಹಂಚಿಕೊಳ್ಳುತ ಸಾಂತ್ವನ ಹೇಳುತ್ತಾ ಕುಟುಂಬದವರಂತೆ ಬೆರೆಯತ ಸದಾ ಜೊತೆಗಿರುವರು.

ಸನ್ನಿವೇಶಗಳು, ಮನುಜರ ನಡುವೆ ಬಂಧನ ಬೆಸೆಯುತ ಸ್ನೇಹದ ಪರಿಧಿಯನ್ನು ಚಾಚುವುದು. ಸಣ್ಣ ಸಣ್ಣ ವಿಷಯಗಳನ್ನು ಮಾತನಾಡುತ






ಸಲುಗೆಯಲ್ಲೇ ಮನದ ಭಾವಗಳನ್ನು ಹೊಸೆಯುತ್ತಾ ,ಅಭಿರುಚಿಗಳ ಅರಿಯುತ್ತಾ ಒಂದಾಗಿ ನಲಿಯುತ ಎಲ್ಲ ಸಮಯದಲ್ಲಿ ಪರಸ್ಪರ ನೋವು ನಲಿವುಗಳಲ್ಲಿ ಭಾಗಿಯಾಗುತ ಒಂದೇ ಕುಟುಂಬದವರಂತೆ ಜೊತೆಯಾಗಿ ಇರುವ ಬಂಧವೆ ಸ್ನೇಹ ಬಂಧನ. ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಅರಿತು ಬೆರೆಯುವೆವು ಒಂದೇ ಮನೆಯವರಂತೆ ಸದಾ ಜೊತೆಗಿರುತ.

ಆಗಾಗ ಚೇಷ್ಟೆ ತರ್ಲೆಗಳ ಮಾಡುತ ಜಗಳವಾಡುತ, ಕಾಡುತ ಮತ್ತೆ ಮೊದಲಿನಂತೆ ಸದಾ ಮಮತೆ ಕಾಳಜಿ ವಹಿಸುತ ಸದಾ ಹಸಿ-ರಿನಂತೆ ನಳನಳಿಸುತ ಬೇರಿನಂತೆ ಗಟ್ಟಿಯಾಗುತ ಹೋಗುವುದು. ಕೋಪ ತಾಪಗಳನ್ನು ಸಹಿಸುತ್ತ ಪ್ರೀತಿಯಿಂದ ಮಾತನಾಡುತ ಏನನ್ನು ಬಯಸದೆ ಇರುವ ನಿಷ್ಕಲ್ಮಶವಾದ ಬಂಧನವೇ ಸ್ನೇಹ.ಆಗಾಗ ಮಾತಿನಲ್ಲಿ ಏರುಪೇರಾದಾಗ ಜಗಳ ಆಗುವುದು ಸಹಜ ಹಾಗಂತ ಸ್ನೇಹವನ್ನೇ ಕಳಚಬಾರದು ಕ್ಷಮೆ ಕೇಳುತ ಮತ್ತೆ ಮೊದಲಿನಂತೆ ಸ್ನೇಹಿತರಾಗಿರಬೇಕು.

ಗೆಳೆತನದ ಮಹತ್ವ

ಗೆಳೆತನದ ಮಹತ್ವ ಅಗಾಧ ಅನುಪಮ ಪದಗಳಲ್ಲಿ ಬಣ್ಣಿಸಲು ಅಸದಳ ಆದರೂ ಕೆಲವೊಂದನ್ನು ಹೇಳಲು ಇಚ್ಛಿಸುವೆ.

1.ಕಷ್ಟ ಸುಖಗಳನ್ನು ಸಮನಾಗಿ ಸ್ವೀಕರಿಸುವಲ್ಲಿ ಸದಾ ಜೊತೆಗಿರುತ್ತಾರೆ.

2.ಯಾವುದೇ ಕಾರ್ಯಕ್ಕೂ ಮುಂದಾದರೂ ಪ್ರೋತ್ಸಾಹ ನೀಡುತ ಯಶಸ್ವಿನತ್ತ ಸಾಗಲು ಪ್ರೇರೇಪಿಸುತ್ತಾರೆ

3.ಏಕಾಂತವನ್ನು ದೂರ ಮಾಡಿ ನಮ್ಮೊಂದಿಗೆ ಸಮಯ ಕಳೆಯುವರು



4.ಪ್ರತಿ ಹಂತದಲ್ಲಿ ಆತ್ಮವಿಶ್ವಾಸವನ್ನು ತುಂಬುತ ಸಾಧಿಸಲು ಭರವಸೆಯ ತುಂಬುವರು

5.ಗುರುವಂತೆ ಮಾರ್ಗದರ್ಶನ ಮಾಡುತ ಸಲಹೆಗಳನ್ನು ಸೂಕ್ತ ರೀತಿಯಲ್ಲಿ ನೀಡುತ್ತಾರೆ

6.ಸ್ನೇಹದಿಂದ ಮನಸನು ಹಗುರಾಗಿಸಿ ಹೊಸದತ್ತ ಸಾಗಲು ಉತ್ತೇಜಿಸುತ್ತಾರೆ.

7.ತಂದೆಯಂತೆ ಪ್ರೀತಿ ತೋರುತ ಅಮ್ಮನಂತೆ ಮಮತೆ ತೋರುವರು

8.ಎಂತಹ ಸಂದರ್ಭದಲ್ಲಿ ಜೊತೆಗಿರುತ ಧೈರ್ಯ ತುಂಬುವರು

9.ಪರಸ್ಪರ ಭಾವನೆಗಳನು ಅರಿತು ಅರ್ಥಮಾಡಿಕೊಳ್ಳುವರು

ಏನೇ ಆದರೂ ದೂರ ಹೋಗದೆ ಎಷ್ಟೇ ಕೋಪಿಸಿಕೊಂಡರು ಮತ್ತೆ ಕ್ಷಮೆ ಕೇಳುತ್ತಾ ಒಂದುಗೂಡುತ ಸಾಗುತ ಯಾವುದೇ ಸ್ವಾರ್ಥ-ವನ್ನು ಇಟ್ಟುಕೊಳ್ಳದೆ ಎರಡು ದೇಹ ಒಂದೇ ಜೀವ ಎಂಬಂತೆ ಬದುಕುವ ಸ್ನೇಹ ಎಂದೆಂದಿಗೂ ಅಮರ.ಜೀವನವು ಸಂತಸದಿ ಸಾಗುತಿರುತ್ತದೆ.ಉಸಿರು ಹೋದರು. ಸ್ನೇಹ ಅಜರಾಮರ. ಸ್ನೇಹವು ಜೀವನಕೆ ಉಸಿರಾಗಲಿ ಚೈತನ್ಯದ ಚಿಲುಮೆಯಾಗಲಿ

ಲೇಖನ
– ಅವಿನಾಶ ಸೆರೆಮನಿ
ಬೈಲಹೊಂಗಲ
ಬೆಳಗಾವಿ ಜಿಲ್ಲೆ



# ಸಿಯುಕೆ: ಅಂತರಾಷ್ಟ್ರೀಯ ಸಮ್ಮೇಳನದ ಪೋಸ್ಟರ್, ವೆಬ್‌ಸೈಟ್ ಅನಾವರಣ



ಕಲಬುರಗಿ:ಕರ್ನಾಟಕಕೇಂದ್ರೀಯವಿಶ್ವವಿದ್ಯಾಲಯದ ಭೂವಿಜ್ಞಾನ ನಿಕಾಯದ ಭೂಗೋಳಶಾಸ್ತ್ರ ವಿಭಾಗದ ವತಿಯಿಂದ, ಮೆಕ್ಸಿಕೋ ನಗರದ ಅಂತರಶಿಸ್ತೀಯ ಅಧ್ಯಯನ ಕೇಂದ್ರ, ರಾಷ್ಟ್ರೀಯ ಪಾಲಿಟೆಕ್ನಿಕ್ ಸಂಸ್ಥೆ ಮತ್ತು ಪ್ರಾದೇಶಿಕ ಹಾಗೂ ಪರಿಸರ ಸಾಮಾಜಿಕ-ನಗರ ಸಮಸ್ಯೆಗಳ ಕುರಿತಾದ ಅಂತರರಾಷ್ಟ್ರೀಯ ಸಂಶೋಧಕರ ಜಾಲ ಸಹಯೋಗದೊಂದಿಗೆ, ಅಕ್ಟೋಬರ್ 26 ರಿಂದ 30 ರವರೆಗೆ ವಿ.ವಿ.ಯ. ಕ್ಯಾಂಪಸ್ ಆವರಣದಲ್ಲಿ "ಭೂಮಿಯ ಹವಾಮಾನ ಮತ್ತು ಪರಿಸರ ವ್ಯವಸ್ಥೆಯ ಮೇಲೆ ಮಾನವನ ಪ್ರಭಾವದ ಕುರಿತು ಐದು ದಿನಗಳ ಕಾಲ ಅಂತರರಾಷ್ಟ್ರೀಯ ಸಮ್ಮೇಳನ ನಡೆಯಲಿದೆ.

ಕೇಂದ್ರೀಯ ವಿ.ವಿ.ಯ ಕುಲಪತಿಗಳಾದ ಪ್ರೊ. ಬಟ್ಟು ಸತ್ಯನಾರಾಯಣ ಹಾಗೂ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ್ ಅವರು ಅಂತರಾಷ್ಟ್ರೀಯ ಸಮ್ಮೇಳನದ ಪೋಸ್ಟರ್ ಬಿಡುಗಡೆ ಹಾಗೂ ಅಧಿಕೃತ ವೆಬ್‌ಸೈಟ್‌ನ್ನು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಭಾರತೀಯ ಸಮ್ಮೇಳನದ ಸಂಚಾಲಕರು ಹಾಗೂ ಭೂವಿಜ್ಞಾನ ನಿಕಾಯದ ಪ್ರೊ. ಎಂ. ಪ್ರಶಾಂತ್ ಮತ್ತು ಭೂವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಡಾ. ಬಾಬು ನಲ್ಲುಸಾಮಿ, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಹಾಗೂ ಸಿಯುಕೆ ಭೂವಿಜ್ಞಾನ ಪ್ರಾಧ್ಯಾಪಕರಾದ ಡಾ.ತೇಜಸ್ವಿ ಲಕ್ಕುಂಡಿ ಅವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಭೂಗೋಳಶಾಸ್ತ್ರ ಮತ್ತು ಭೂವಿಜ್ಞಾನ ವಿಭಾಗದ ಪ್ರಾಧ್ಯಾಪಕರುಗಳಾದ ಪ್ರೊ. ಮಹಮ್ಮದ್ ಅಸ್ಲಾಂ, ಡಾ. ಲಿಂಗದೇವರು ಎಂ., ಡಾ. ಅರ್ಚನಾ ಕುಜೂರ್, ಡಾ. ಕೆ. ಚನ್ನಬಸಪ್ಪ, ಡಾ. ರೋಶನಿ ಪಟೇಲ್, ಡಾ. ಎಂ. ಅಲೀಂ ಪಾಷಾ, ಡಾ. ಬಿ. ಮಹಾಲಿಂಗಂ, ಡಾ. ಅಶೋಕ್ ಕುಮಾರ್, ಡಾ. ವಿಶ್ವನಾಥ್ ಬಿ.ಸಿ.ಟಿ., ಡಾ. ಎಸ್.ಎಸ್.ಎಸ್. ಕುಮಾರ್ ಸೇರಿದಂತೆ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಐಸಿಇಇಎ ಮೊದಲ ಸಮ್ಮೇಳನವು ನಮ್ಮ ಕರ್ನಾಟಕ ಕೇಂದ್ರೀಯ ವಿ.ವಿ.ಯ ಕ್ಯಾಂಪಸನಲ್ಲಿ 2021ರಲ್ಲಿ ನಡೆದಿದ್ದು, ಎರಡನೇ ಆವೃತ್ತಿಯು ಸಹ ಮಾರ್ಚ್ 2025ರಲ್ಲಿ ಆಯೋಜಿಸಲಾಗಿತ್ತು, ಈ ಮುಂಬರುವ ಸಮ್ಮೇಳನವು -ಐಸಿಇಇಎ2026 ರ ಮೂರನೇ ಆವೃತ್ತಿಯೂ ಸಹ ನಮ್ಮ ವಿ.ವಿ.ಯಲ್ಲಿ ಆಯೋಜನೆಗೊಂಡಿದೆ.


ಕಾರ್ಯಕ್ರಮದ ವಿವರವು ಅಕ್ಟೋಬರ್ 26 ರಿಂದ 28, 2026 ರವರೆಗೆ ಅಂತರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭ, ಅಂತರರಾಷ್ಟ್ರೀಯ ಖ್ಯಾತ ತಜ್ಞರಿಂದ ಪ್ರಮುಖ ಭಾಷಣಗಳು, ತಾಂತ್ರಿಕ ಅವಧಿಗಳು ನಡೆಯಲಿದೆ. ಹಲವಾರು ಸಂಶೋಧನಾ ಮಹಾ ಪ್ರಬಂಧಗಳ ಮಂಡನೆಯಾಗಲಿದ್ದು, ಶೈಕ್ಷಣಿಕ ಚರ್ಚೆ ಮತ್ತು ಸಂವಾದ ಸಹ ನಡೆಯಲಿದೆ. ಅಕ್ಟೋಬರ್ 29 ಮತ್ತು 30 ರಂದು ಶೈಕ್ಷಣಿಕ ಹಾಗೂ ಭೂವೈಜ್ಞಾನಿಕ ಅಧ್ಯಯನಕ್ಕಾಗಿ ಹಟ್ಟಿ ಚಿನ್ನದ ಗಣಿ ಸೇರಿದಂತೆ ಭೂವೈಜ್ಞಾನಿಕ ಗಣಿ ಪ್ರದೇಶಗಳಿಗೆ ಭೇಟಿ ನೀಡಲಿದ್ದು, ಭೂವಿಜ್ಞಾನ ಕ್ಷೇತ್ರದ ತಜ್ಞರೊಂದಿಗೆ ಸಂವಾದ ಮತ್ತು 30 ರಂದು ಸಮಾರೋಪ ಸಮಾರಂಭ ನಡೆಯಲಿದೆ.

ಈ ಸಮ್ಮೇಳನದ ಪ್ರಮುಖ ಉದ್ದೇಶ ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹವಾಮಾನ ವೈಪರೀತ್ಯದ ಬದಲಾವಣೆ, ಸುಸ್ಥಿರತೆ, ನೈಸರ್ಗಿಕ ಸಂಪನ್ಮೂಲಗಳು, ಭೂ-ವಿಜ್ಞಾನಗಳು, ಪರಿಸರದ ಅವನತಿ, ವಿಪತ್ತು ನಿರ್ವಹಣೆ, ಆಡಳಿತ ಹಾಗೂ ಪರಿಸರ ಸ್ಥಿತಿಸ್ಥಾಪಕತ್ವಕ್ಕಾಗಿ ತಾಂತ್ರಿಕ ಪರಿಹಾರಗಳು ಸೇರಿದಂತೆ ಮಾನವನ ಯುಗದಲ್ಲಿ ಪ್ರಮುಖ ಭೂಮಿ ಮತ್ತು ಪರಿಸರದ ಸವಾಲುಗಳ ಬಗ್ಗೆ ಚರ್ಚೆ, ಪ್ರಶ್ನೋತ್ತರ, ಸಂವಾದ ನಡೆಯಲಿದೆ. ದೇಶ-ವಿದೇಶದ ಸಂಶೋಧಕರು, ಶಿಕ್ಷಣ ತಜ್ಞರು, ಪರಿಸರವಾದಿಗಳು, ನೀತಿ ನಿರೂಪಕರು ಒಂದೇ ವೇದಿಕೆಯಲ್ಲಿ ಭಾಗಿಯಾಗಲಿದ್ದಾರೆ.

ಈ ಸಮ್ಮೇಳನದ ಪ್ರಮುಖ ವಿಷಯಗಳಾಗಿ ಭೂವಿಜ್ಞಾನ ಮತ್ತು ಭೂಮಿಯ ವಸ್ತುಗಳು, ಭೂ-ಪರಿಸರ ವಿಜ್ಞಾನ ಮತ್ತು ಸುಸ್ಥಿರತೆ, ಸಾಗರ ಭೂವಿಜ್ಞಾನ ಮತ್ತು ಕರಾವಳಿ ವ್ಯವಸ್ಥೆಗಳು, ತಾಂತ್ರಿಕ ಮತ್ತು ಅನ್ವಯಿಕ ಭೂ ವಿಜ್ಞಾನಗಳು, ಪರಿಸರದ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳು, ವಿಪತ್ತು ನಿರ್ವಹಣೆ, ಪರಿಸರ ಸುಸ್ಥಿರತೆ, ಆಡಳಿತ ಮತ್ತು ಹಸಿರು ಅಭಿವೃದ್ಧಿ ಸೇರಿದಂತೆ ಇತರೆ ವಿಷಯಗಳು ಚರ್ಚೆಗೆ ಬರಲಿವೆ.

ಈ ಅಂತರಾಷ್ಟ್ರೀಯ ಸಮ್ಮೇಳನದ ಕುರಿತು ಹೆಚ್ಚಿನ ಮಾಹಿತಿಗಾಗಿ ಭಾರತೀಯ ಸಂಚಾಲಕರು ಹಾಗೂ ಸಿಯುಕೆಯ ಭೂವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಬಾಬು ನಲ್ಲುಸಾಮಿ ಮೊಬೈಲ್: 9945594842, ಇಮೇಲ್: babun@cuk.ac.in | iceea@cuk.ac.in, ಹಾಗೂ ಅಂತರರಾಷ್ಟ್ರೀಯ ಸಂಯೋಜಕರಾದ ನ್ಯಾಷನಲ್ ಪಾಲಿಟೆಕ್ನಿಕ್ ಇನ್ಸಿಟ್ಯೂಟ್, ಮೆಕ್ಸಿಕೋ ಡಾ. ಜೊನಾಥನ್ ಮಾಥ-ಸ್ವಾಮಿ ಪಿ. ಇಮೇಲ್:mpjonathan7@yahoo.com ಸಂಪರ್ಕ ಮಾಡಬಹುದಾಗಿದೆ. ಹಾಗೂ ಇನ್ನೂ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ ಭೇಟಿ ನೀಡಬಹುದಾಗಿದೆ.

# ಮನೆ ಮನಗಳ ಗೆದ್ದ ಒಲವಿನಲಿ ಒಂದಾಗುವಾ





■ ಉದಯರಶ್ಮಿ ದಿನಪತ್ರಿಕೆ

ಹಲೋ, ನನ್ನ ಪ್ರೀತಿಯ ಪ್ರೀತಿ

ಮೊದಲೇ ನೀನು ಮುಸ್ಸಂಜೆಯ ರವಿ ರಶ್ಮಿಯೊಳಗೆ ಮಿಂದೆದ್ದ ಬಂಗಾರ ವರ್ಣದ ಬಂಗಾರಿ. ಸಿಂಗಾರವಿಲ್ಲದ ಸಿಂಗಾರಿ. ಬಲು ಚೆಂದ ನಿನ್ನ ವೈಖರಿ. ಹೇಗೆ ವರ್ಣಿಸಲಿ ನಿನ್ನ ಸೌಂದರ್ಯದ ಸಿರಿ. ಕಾಣುವ ಸೌಂದರ್ಯದ ಸಾರವನ್ನೆಲ್ಲ ನಿನ್ನಲ್ಲಿ ಹಿಡಿದಿಟ್ಟುಕೊಂಡವಳಂತೆ. ಹರೆಯದ ಹೈಕಳೆಲ್ಲ ಮೊದಲ ನೋಟದಲ್ಲೇ ಒಲವಿನ ಬಲೆಯಲ್ಲಿ ಬೀಳುವಂತೆ ವೈಯ್ಯಾರ. ನಿನ್ನ ಸೋಜಿಗದ ಸೊಬಗು ಕಂಡು ನನ್ನ ತಲೆಯೊಳಗೊಂದು ಗಾಂಧಾರ ಲೋಕವರಳಿತು.. ನೀಲಿ ಕಂಗಳ ಮಿಟುಕಿಸಿ ಕಪ್ಪಾದ ಮುಂಗುರುಳ ಸರಿಸಿದಾಗ ನನ್ನ ಹರೆಯ ಮರುಹುಟ್ಟು ಪಡೆಯಿತು. ಕೆಂದಾವರೆ ಕೆನ್ನೆಯ ನಾಚಿಕೆಯ ಕೆಂಪು ತಂತು ಮನಕ್ಕೆ ತಂಪು. ನಿನ್ನ ಗುಳಿಕೆನ್ನೆ ದೃಷ್ಟಿಬೊಟ್ಟಿನಂತೆ. ಬಾನಾಡಿ ಗರಿಗೆದರಿ ಗಗನದೆಡೆ ನೋಡಿ ನಕ್ಕಂತೆ ನೀ ನನ್ನಡೆ ನೋಡಿ ನಕ್ಕೆ. ನನ್ನ ಹೃದಯದಲ್ಲಿ ಯಾರೂ ಬರೆಯದ ಒಲವಿನ ಚಿತ್ತಾರ ಬರೆದೆ. ಆ ಗಳಿಗೆಯಿಂದ ನನ್ನೀ ಮನ ಅಂದದ ಹೂವನು ಮೆಲ್ಲಗೆ ಸ್ಪರ್ಷಿಸಿ ಮಧು ಹೀರಿ ಸಂಭ್ರಮಿಸುವ ಭ್ರಮರದಂತೆ ಆಗಿದೆ.

ಮೊದಲಬಾರಿನಿನ್ನನೋಡಿದ್ದುವಿಶ್ವವಿದ್ಯಾಲಯದ ವಾಚನಾಲಯದಲ್ಲಿ. ನೀನಲ್ಲಿ ಇರುವವರೆಗೆ ನನ್ನ ದೃಷ್ಟಿ ನಿನ್ನತ್ತ ನೆಟ್ಟಿತ್ತು. ಮನಸ್ಸು ನಿನ್ನ ಮುಖದಲ್ಲಿದ್ದ ಮುಗ್ಧತೆಗೆ ಮಾರು ಹೋಗಿತ್ತು. ಆ ಬಟ್ಟಲು ಕಂಗಳಲ್ಲಿ ಅಳೆದು ತೂಗಿ ಲೆಕ್ಕ ಹಾಕುವ ಲೆಕ್ಕಾಚಾರದ ಗೆಳೆತನ



ಮಾಡುವ ಯಾವ ಮುನ್ಸೂಚನೆಯೂ ಇರಲಿಲ್ಲ. ನಿನ್ನ ನೋಡುವ ಮುನ್ನ ನನ್ನ ಪ್ರಪಂಚ ತುಂಬಾ ಚಿಕ್ಕದಿತ್ತು. ಅಪ್ಪ, ಅವ್ವ, ಭವಿಷ್ಯದ ಬಗೆಗಿನ ಸುಂದರ ಕನಸುಗಳು, ಮತ್ತು ಓದು ಇಷ್ಟೇ. ನಿನ್ನೊಂದಿಗಿನ ಸಣ್ಣ ಸಣ್ಣ ಮಾತುಗಳು, ತರಗತಿಯ ನೋಟ್ಸ್‌ಗಳು. ಹುಟ್ಟುಹಬ್ಬದ ಶುಭಾಶಯಗಳು, ಪರೀಕ್ಷೆಯ ಚರ್ಚೆಗಳ ಮೂಲಕ ಗೆಳೆತನ ಬೆಳೆಯಿತು.

ಆ ಗೆಳೆತನ ನೋಡುನೋಡುವುದರಲ್ಲೇ ಸ್ನೇಹದ ರೇಖೆ ದಾಟಿತ್ತು. ಒಲವಿನ ಗಡಿಯಲ್ಲಿ ಬಂದು ನಿಂತಿತ್ತು ಮನಸ್ಸು. ಹೃದಯದೊಳಗೆ ಬೇರು ಬಿಟ್ಟಿದ್ದ ಇಷ್ಟು ದಿನ ಅಡಗಿಸಿಟ್ಟಿದ್ದ ಪ್ರೀತಿಯ ಮಾತನ್ನು ಹೇಳಲು ಮುಂದಾಗಿತ್ತು. ಧೈರ್ಯ ಮಾಡಿ ಒಂದು ಸಂಜೆ ಕಾಲೇಜಿನ ಆವರಣದಲ್ಲಿ ಹೇಳಿಯೇ ಬಿಟ್ಟೆ. ಆಗ ನೀನು ಸುಮ್ಮನೇ ಒಂದು ಸುಂದರ ನಗು ಚೆಲ್ಲಿ ಬೈ ಹೇಳಿ ಬೈಕ್ ಏರಿದ್ದೆ. ಹಲವು ತಿಂಗಳುಗಳು ಕಳೆದ ಮೇಲೆ ಮೊಬೈಲಿನಲ್ಲಿ 'ಐಲವ್ಯೂ' ಆದರೆ, ಜಾತಿ ಇಬ್ಬರ ಪ್ರೀತಿಯ ನುಂಗಿಬಿಡುವುದೇ? ಎನ್ನುವ ಹೆದರಿಕೆ ಕಾಡುತ್ತಿದೆ. ಎನ್ನುವ ಮೆಸೇಜು ನನಗಾಗಿ ಕಾದಿತ್ತು. ಪ್ರೀತಿ ಪ್ರೇಮ ಎಲ್ಲ ಓದು ಮುಗಿದ ಮೇಲೆ ಎಂಬ ಸಂದೇಶವೂ ಅದರ ಕೆಳಗೆ ಕುಳಿತಿತ್ತು. ಪ್ರೇಮ ದೇವತೆಯಂತಿರುವ ನೀನು ಕಾಲಿಟ್ಟಮೇಲೆ ನನ್ನ ಪ್ರಪಂಚ ವಿಶ್ವದಷ್ಟು ವಿಸ್ತಾರವಾಯಿತು.

ಅಂದು ಅರ್ಧ ರಾತ್ರಿ ಸರಿದರೂ ಕಣ್ರೆಪ್ಪೆಗಳು ಒಂದಕ್ಕೊಂದು ಅಪ್ಪಿಕೊಳ್ಳಲೇ ಇಲ್ಲ. ಕಂಗಳಲ್ಲಿ ನಿಧಾನವಾಗಿ ಕನಸುಗಳು ಒಂದಾದ ಮೇಲೊಂದು ಜಾರುತ್ತಿದ್ದವು. ಮೇಜಿನ ಮೇಲೆ ತೆರೆದಿಟ್ಟಿದ್ದ ಪುಸ್ತಕದ ಕೊನೆಯ ಪುಟದ ಮೇಲೆ ನಿನ್ನ ಹೆಸರನ್ನು ಮತ್ತೆ ಮತ್ತೆ ಬೆರಳುಗಳು ಬರೆಯತೊಡಗಿದವು. ಅಂತೂ ಇಂತೂ ನನ್ನ ಪ್ರೀತಿಯ ಹುಡುಗಿಯ ಎದೆಯಲ್ಲಿ ನನಗಾಗಿ ಪ್ರೀತಿಯಿದೆ ಎಂದು ತಿಳಿದ ಮೇಲೆ ಒಲವಿನ ಲೋಕ ಸಣ್ಣದಾಗಿ ತೆರೆದುಕೊಂಡಂತೆ ಅನಿಸಿತ್ತು. ಹೇಳದೆ





ಕೇಳದೆ ಹೃದಯ ಆಗಲೇ ಪ್ರೀತಿಯೆಂಬ ಸುಂದರ ಲೋಕದಲ್ಲಿ ತೇಲಾಡಲು ಶುರು ಮಾಡಿತ್ತು.

ಜೀವನ ರೋಚಕ ತಿರುವು ಪಡೆದುಕೊಂಡಿದ್ದು ನಿನ್ನಿಂದಲೇ ಕಣೆ. ನೀನು ಸೌಂದರ್ಯದ ರಾಶಿ ಮಾತ್ರವಲ್ಲ ಕರುಣೆ, ಮಮತೆ, ಮಾನವತೆಯ ಸಾಗರ. ನಿನ್ನ ಸದ್ಗುಣಗಳು ನನಗೆ ಬಹಳ ಬಹಳ ಒಳ್ಳೆಯ ಸಂಗತಿಗಳನ್ನು ಕಲಿಸಿದ್ದವು. ಪ್ರೀತಿಗೆ ಜಾತಿಯ ಹಂಗಿಲ್ಲ ನಿಜ ಆದರೆ, ಪ್ರೀತಿಗೆ ನಂಬಿಕೆ ಬಲು ಮುಖ್ಯ ಎಂಬುದನ್ನು ಸಾರಿ ಸಾರಿ ಹೇಳಿದ್ದವು. ಪ್ರೀತಿಯಲ್ಲಿ ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳುವುದು ಅತಿ ಮುಖ್ಯ ಎಂಬ ಪಾಠ ಹೇಳಿಕೊಟ್ಟವು. ಪ್ರೀತಿ ಕೇವಲ ಎರಡು ಹೃದಯಗಳ, ಎರಡು ದೇಹಗಳ ಮಿಲನವಲ್ಲ. ಆದು ಅದರಾಚೆಗೆ ಅಗಾಧವಾಗಿ ವ್ಯಾಪಿಸಿದೆ. ಸಾಗರದಷ್ಟು ಆಳ. ಆಕಾಶದಷ್ಟು ಅಗಲ ಅನ್ನೋದು ನಿನ್ನಿಂದಲೇ ತಿಳಿದಿದ್ದೆ. ಪ್ರೀತಿ ಎರಡು ಕುಟುಂಬಗಳನ್ನು ಒಂದಾಗಿಸಬೇಕು. ಎಂಬ ಕಿವಿಮಾತು ಹೇಳಿದ್ದೆ. ಆಪ್ತ ಸಖಿಯಾಗಿದ್ದೆ. ಮನದರಸಿಯಾಗಿ ಮನದಲ್ಲಿ ಮನೆ ಮಾಡಿದ್ದೆ.

ಈ ಕಾಲದಲ್ಲಿ ಹಿಂದೆ ಮುಂದೆ ವಿಚಾರಿಸದೇ, ಹೆತ್ತವರ ಮನಸ್ಥಿತಿ ಅರ್ಥ ಮಾಡಿಕೊಳ್ಳದೇ, ಕ್ಷಣ ಸುಖಕ್ಕಾಗಿ ಪೂರ್ತಿ ಜೀವನ ಹಾಳು ಮಾಡಿಕೊಳ್ಳುತ್ತಿರುವ ಹುಡುಗ ಹುಡುಗಿಯರ ಹೆಚ್ಚುತ್ತಿದ್ದಾರೆ. ಮನೆಯವರ ಕಣ್ಣುಗಳ ತೇವಗೊಳಿಸದೇ ಹೃದಯಗಳನ್ನು ಪವಿತ್ರ ಪ್ರೇಮದ ಬಂಧನದಲ್ಲಿ ಬಂಧಿಸುವ ಬಗ್ಗೆ ಹೇಳಿದ ಮಾತುಗಳು ನಿನ್ನ ಪ್ರಬುದ್ಧತೆಯನ್ನು ಸಾರಿದ್ದವು. ಜೀವನ ಎಷ್ಟು ಅಮೂಲ್ಯ ಅದರಲ್ಲಿ ಗೊತ್ತಿಲ್ಲದೇ ಜಾರುವ ಈ ಯೌವ್ವನದ ಬಯಕೆಗಳು ಒಂದು ಭಾಗ ಎಂದೆಲ್ಲ ಹೇಳಿದ್ದವು. 'ನನ್ನಲ್ಲಿರುವ ಬುದ್ಧಿವಂತಿ-ಕೆ ಇಷ್ಟ. ಕಟ್ಟುಮಸ್ತಾದ ದೇಹದಾರ್ಢ್ಯತೆ ಬಗ್ಗೆ ನಿನಗೆ ಎಲ್ಲಿಲ್ಲದ ಆಕರ್ಷಣೆ.' ಎಂದು ನೀ ಹೇಳಿದ ದಿನ ಆಕಾಶ ಮೂರೇ ಗೇಣು ಉಳಿದಿತ್ತು. ನೀ ಕಾಣದ ಸ್ವರ್ಗವನು ತೋರುವ ಆಸೆ ಮನದಲ್ಲಿ ಹೊಮ್ಮಿತ್ತು.

ನೀನು ಪ್ರೇಮ ಗಂಗೆ. ನಿರಂತರವಾಗಿ ಪ್ರೇಮ ಜಲವನ್ನು ಹೊತ್ತು ಸಾಗುವವಳು. ಪ್ರೀತಿ-ಪ್ರೇಮ ಸರಸ-ಸಲ್ಲಾಪ ಹೀಗೆ ಹತ್ತು ಹಲವು ಭಾವದೊಡಲಿನ ಭಾವಗಳನ್ನು ನಿನ್ನೊಂದಿಗೆ ಹಂಚಿಕೊಳ್ಳುವ ಆ ಕ್ಷಣ ಯಾವಾಗ ಬರುವುದೆಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದೆ. ಈಗ ಕಾಯುವಿಕೆಗೆ ಪೂರ್ಣವಿರಾಮ ಇಡುವ ಸಮಯ ಸನ್ನಿಹಿತವಾಗಿದೆ. ನಿನ್ನ ನೆನಪಿನ ವಿನಃ ಮುಂಜಾನೆ ಆರಂಭವಾಗುವುದಿಲ್ಲ. ರಾತ್ರಿಗಳು ಕೊನೆಯಾಗುವುದಿಲ್ಲ. ನಿನ್ನ ಜೊತೆ ಕಳೆದ ಚೆಂದದ ನೆನಪುಗಳು ಕಾಡಿಸುತ್ತಲೇ ಇರುತ್ತವೆ.

ಅದರಲ್ಲೂ ಇಬ್ಬರ ಮನೆಯಲ್ಲಿ ಮದುವೆಗೆ ಹಸಿರು ನಿಶಾನೆ ಸಿಕ್ಕಮೇಲೆ ನೀ ಸಿಕ್ಕ ಕ್ಷಣ ವಿನೂತನ. ಮಳೆಗಾಲದ ಸಂಜೆಯದು ಮದುವೆಯ ನಿಶ್ಚಯದ



ಸುದ್ದಿ ಹೇಳಲು ನನ್ನ ರೂಮಿಗೆ ಬಂದಿದ್ದೆ. ಹೊರಗೆ ಸಿಡಿಲು ಗುಡುಗಿನ ಸದ್ದಿದ್ದರೂ ಇಬ್ಬರ ನಡುವೆ ನಿಶಬ್ದ ಆವರಿಸಿತ್ತು. ಕೋಣೆಯ ತುಂಬ ಕೇವಲ ಉಸಿರಾಟದ ಸದ್ದು ಆವರಿಸಿತ್ತು. ಕಿಟಕಿಯಿಂದ ತೂರಿ ಬರುತ್ತಿದ್ದ ಗಾಳಿಗೆ ಹಾರುತ್ತಿದ್ದ ಮುಂಗುರಳಗಳು ನಿನ್ನ ಕೆನ್ನೆಯನ್ನು ಬಿಡದೇ ಮುತ್ತಿಕ್ಕುವುದರಲ್ಲಿ ನಿರತವಾಗಿದ್ದವು. ಕೆನ್ನೆಯ ಮೇಲಿನ ನಾಚಿಕೆಯ ಕೆಂಪು ಮೆಲ್ಲನೆ ನಿನ್ನ ಹತ್ತಿರ ಸರಿಯುವಂತೆ ಮಾಡಿತ್ತು. ತಂಗಾಳಿಗೆ ನಡುಗುತ್ತಿದ್ದ ಕೈಬೆರಳುಗಳನ್ನು ನಿಧಾನವಾಗಿ ಹಸ್ತದೊಳಗೆ ತೆಗೆದುಕೊಂಡೆ. ಆಗ ಇಬ್ಬರ ಮೈಯಲ್ಲೂ ವಿದ್ಯುತ್ ಸಂಚಾರವಾಗಿತ್ತು. ನಿಧಾನವಾಗಿ ನನ್ನತ್ತ ಸರಿದಾಗ ತೋಳುಗಳು ಸದ್ದಿಲ್ಲದೇ ನಿನ್ನನ್ನು ಬಂಧಿಸಿದ್ದವು.

ತೋಳತೆಕ್ಕೆಯಲ್ಲಿದ್ದಾಗ ಕಣ್ಣೆತ್ತಿ ನನ್ನ ಕಣ್ಣುಗಳನ್ನು ನೋಡುತ್ತ ಇಡೀ ಜನ್ಮ ಹೀಗೆ ಜೊತೆಯಾಗಿರುವ ಆಸೆಯ ಹೇಳುತ್ತ ಹಣೆಗೆ ಹೂಮುತ್ತನಿತ್ತೆ. ಅದರಲ್ಲಿ ಜೊತೆಯಾಗುವ ನಂಬಿಕೆಯ ಭಾವೋನ್ಮಾದ ಎದ್ದು ಕಾಣುತ್ತಿತ್ತು. ಹೂಮುತ್ತಿಗೆ ಪ್ರತಿಯಾಗಿ ನನ್ನ ಅಧರಗಳು ನಿನ್ನ ಕಣ್ಣು ಕೆನ್ನೆಗಳನ್ನು ಚುಂಬಿಸಿದ್ದವು. ನಾವೇನೂ ಕಡಿಮೆ ಇಲ್ಲವೆಂಬಂತೆ ನಿನ್ನ ಅಧರಗಳು ಸ್ಪರ್ಧೆಗಿಳಿದವು. ಹನಿಹನಿ ಮಳೆಯೂ ನಮ್ಮಿಬ್ಬರ ಪ್ರೇಮಕ್ಕೆ ಸಂಗೀತ ನುಡಿಸಿದಂತೆ ಭಾಸವಾಗಿತ್ತು. ಆ ಕ್ಷಣದಲ್ಲಿ ಇಬ್ಬರ ಹೃದಯದ ಬಡಿತ ಒಂದೇ ತಾಳಕ್ಕೆ ಮಿಡಿಯುತ್ತಿತ್ತು.

ಆ ನೆನಪು ನೆನೆದಾಗಲೊಮ್ಮೆ ಮೈಯನ್ನು ಮನಸ್ಸನ್ನು ಬೆಚ್ಚಗಾಗಿಸುತ್ತದೆ. ನನ್ನೆದೆಯ ಆಳದಲ್ಲಿ ತುಂಟಾಟದ ಬುಗ್ಗೆಯನ್ನು ಚಿಮ್ಮಿಸುತ್ತದೆ. ಆ ಮಧುರ ಭಾವ ಮತ್ತಷ್ಟು ಮಗದಷ್ಟು ಬಯಕೆಗಳ ಮುಂದೆ ಚೆಲ್ಲುತ್ತದೆ. ಪ್ರೀತಿಯ ಮುಂದಿನ ಸಂಚಿಕೆ ಯಾವಾಗ ಎಂದು ನಗುತ್ತ ಕೇಳುತ್ತಿದೆ. ಇನ್ನು ಜೀವನವೆಲ್ಲ ಪ್ರತಿ ಇರುಳು ಪ್ರಥಮ ಇರುಳು ಪ್ರತಿದಿನವೂ ಪ್ರೀತಿಯ ಹೊಸ ಹೊಸ ಸಂಚಿಕೆಗಳ ಸಾಲು ಮುಂದುವರಿಸಲು ಬಂದುಬಿಡು ಕಾಯುತಿರುವೆ ಪ್ರೇಮ ಮಂಚದ ಮೇಲೆ ಹೂ ಚೆಲ್ಲಿ. ಇಂತಿ ನಿನ್ನ ಪ್ರೀತಿಯ

■ **ಪ್ರೇಮ್**
(ಪ್ರೇಮಶೇಖರ)

ಲೇಖನ
– ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
9449234142






# ಅರ್ಥಿಕವಾಗಿ ಸದೃಡ ದೇಶಗಳಿಗೆ ನಿಂಬೆ ರಫ್ತು ಮಾಡಿ :ನಾಗವೇಣಿ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಅರ್ಥಿಕವಾಗಿ ಸದೃಡ ಮತ್ತು ಯುದ್ಧ ರಹಿತ, ಗಲಭೆ ರಹಿತ ದೇಶಗಳಿಗೆ ಮಾತ್ರ ನಿಂಬೆ ರಫ್ತು ಮಾಡಿ ಎಂದು ಬೆಂಗಳೂರಿನ ರಫ್ತು ಸಲಹೆಗಾರರು ಡಾ. ನಾಗವೇಣಿ ಸಿ.ಆರ್ ಹೇಳಿದರು.

ನಗರದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ವಿಜ್ಞಾನ ಕೇಂದ್ರ ಇಂಡಿ ಮತ್ತು ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ದಿ ನಿಗಮ ಬೆಂಗಳೂರು ಇವರ ಸಹಯೋಗದಲ್ಲಿ ನಡೆದ ಇಂಡಿ ನಿಂಬೆ ರಫ್ತು ಪ್ರಕ್ರಿಯೆ ಕುರಿತು ಅರಿವು ಮೂಡಿಸುವ ಕಾರ್ಯಾಗಾರದಲ್ಲಿ ಮಾತನಾಡಿದರು.

ನಿಂಬೆ ರಫ್ತು ಮಾಡುವ ರೈತ ಅಥವಾ ರೈತ ಸಂಘಟನೆಗಳು ಸಂಸ್ಥೆ ಸ್ಥಾಪಿಸಿ ಅದರ ಆಧಾರ ಕಾರ್ಡು, ಪಾನ ಕಾರ್ಡು, ಜಿಎಸ್ ಟಿ ನಂ, ಬ್ಯಾಂಕ ಅಕೌಂಟ ನಂ ನೀಡಿ ಆಮದು ಮತ್ತು ರಫ್ತು ಕೋಡ ಮಾಡಬೇಕು. ರಜಿಸ್ಟ್ರೇಷನ್ ಮಾಡಿ ಸರ್ಟಿಫಿಕೇಟ ಪಡೆಯಬೇಕು. ಆಮದು ರಫ್ತು ಬ್ಯಾಂಕ ಖಾತೆ ಮಾಡಿ ಇಸಿಜಿಸಿ ಇನ್ಸುರೆನ್ಸ ಮತ್ತು ಎಚ್ ಎಸ್ ಕೋಡ ತೆಗೆದು ರಫ್ತು ಮಾಡಬಹುದು ಎಂದರು. ಇದಕ್ಕೆ ಅಪೆಡಾ ಸಂಸ್ಥೆ ಇಲ್ಲವೆ ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ದಿ ನಿಗಮ ಸಂಪೂರ್ಣ ಸಹಕರಿಸುತ್ತದೆ.

ನಮ್ಮಲ್ಲಿ ನಿಂಬೆ ಬೆಳೆಗೆ ಬಹಳ ಬೇಡಿಕೆ ಇದ್ದಾಗ ರಫ್ತು ಮಾಡಲು ಬರುವದಿಲ್ಲ. ಇಲ್ಲದಿದ್ದರೆ ನೀವು ಇಂಡಿಯ ನಿಂಬೆ ಜಗತ್ತಿನೆಡೆಗೆ ಕಳುಹಿಸಬಹುದು ಎಂದರು.

ನಿಂಬೆ ಗುಣಮಟ್ಟದಿಂದ ಕುಡಿರಬೇಕು, ಇಂಡಿಯ ನಿಂಬೆಗೆ 25 ಹೊರ ರಾಷ್ಟ್ರದಲ್ಲಿ ಸಾಕಷ್ಟು ಬೇಡಿಕೆ ಇದೆ. ನಿಂಬೆ ಉತ್ಪನ್ನಗಳನ್ನು ಮಾಡಿ ನಿಂಬೆ ಉಪ್ಪಿನಕಾಯಿ, ನಿಂಬೆ ಪೌಡರ ಸೇರಿದಂತೆ ಇನ್ನಿತರ ರಫ್ತು ಮಾಡಬಹುದು ಎಂದರು.

ಇಂಡಿಯ ಕೃಷಿ ತಜ್ಞ ಡಾ. ಪ್ರೇಮಚಂದ್ರ ಮಾತನಾಡಿ ನಿಂಬೆಗೆ ಬೆಳವಣೆಗೆ ಹಂತದಲ್ಲಿ ಕ್ಲೋರೊಪಿರಿಪಾಸ್, ಡೈಮಿಥೋಟ್, ಕಾರ್ಬೆಂಡಜಿನ್, ಸ್ಟ್ರೇಪ್ಟೋಮಾಯಿಸಿನ ರಸಾಯನಿಕ ಔಷದ ಕೊಡಬಾರದು. ಕೊಟ್ಟರೆ ಗುಣಮಟ್ಟದ ನಿಂಬೆ ಬರುವದಿಲ್ಲ. ಮತ್ತು ವಿದೇಶದಲ್ಲಿ ಬೇಡಿಕೆ ಇರುವದಿಲ್ಲ ಎಂದರು.

ಸಂಸ್ಥಾಪಕರು ಮತ್ತು ನಿರ್ದೇಶಕರು ಲಿಂಗರಾಜ ಮನಗೂಳಿ, ಡಾ. ಕಾರಂತ, ಸಹ ವಿಸ್ತಿರಣಾ ನಿರ್ದೇಶಕ ಕೃಷಿ ವಿಸ್ತರಣಾ ಕೇಂದ್ರ ವಿಜಯಪುರದ ಡಾ. ಆರ್ ಜೊಳ್ಳಿ, ಇಂಡಿಯ ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥ ಡಾ. ಶಿವಶಂಕರ ಮೂರ್ತಿ, ತೋಟಗಾರಿಕೆ ಉಪನಿರ್ದೇಶಕ ಡಾ. ಸಿದ್ದಲಿಂಗೇಶ್ವರ ವ್ಯವಸ್ಥಾಪಕ ನಿರ್ದೇಶಕ ಕರ್ನಾಟಕ ರಾಜ್ಯ ನಿಂಬೆ ಅಭಿವೃದ್ದಿ ಮಂಡಳಿ ರಾಹುಲಕುಮಾರ ಭಾವಿದೊಡ್ಡಿ, ಡಾ. ವೀಣಾ ತೋಟಗಾರಿಕೆಯ ಸತೀಶ ಬಡಿಗೇರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಡಾ.ಪ್ರಸಾದ, ಡಾ,ಪ್ರಕಾಶ, ಡಾ.ಕಿರಣಕುಮಾರ ಗೋರಬಾಳ, ಡಾ. ಶ್ರೀಪಾದ ವಿಶ್ವೇಶ್ವರ, ರಾಮಕೃಷ್ಣ ಮತ್ತಿತರಿದ್ದರು.



# ವಿನಾಯಕ ಪತ್ತಾರ ಅವಿರೋಧ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರದ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿರುವ ಶ್ರೀ ಮಹಾಲಕ್ಷ್ಮಿ ಸಹಕಾರಿ ಬ್ಯಾಂಕ್

ಹಿಂದುಳಿದ ವರ್ಗ (ಅ) ನಿರ್ದೇಶಕ ಸ್ಥಾನಕ್ಕೆ ವಿನಾಯಕ ಬಸವರಾಜ ಪತ್ತಾರ ಅವರು ಅವಿರೋಧವಾಗಿ ಆಯ್ಕೆಯಾದರು.

ಈ ವೇಳೆ ಅವರನ್ನು ಹೃದಯಸ್ಪರ್ಶಿಯಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಪ್ರತಿಷ್ಠಿತ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಆಯ್ಕೆ ಮಾಡುವ ಮೂಲಕ ಸೇವೆ ಮಾಡುವ ಅವಕಾಶ ಕಲ್ಪಿಸಿದ್ದಕ್ಕೆ ನಾನು ಚಿರ ಋಣಿ, ಎಲ್ಲ ನಿರ್ದೇಶಕರ, ಗ್ರಾಹಕರ, ಸಿಬ್ಬಂದಿಗಳ ಸಹಾಯ ಸಹಕಾರದೊಂದಿಗೆ ನನಗೆ ವಹಿಸಿರುವ ಜವಾಬ್ದಾರಿ ನಿಭಾಯಿಸುವೆ, ಬ್ಯಾಂಕಿನ ಪ್ರಗತಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುವೆ ಎಂದು ವಿನಾಯಕ ಪತ್ತಾರ ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ಮಹಾಲಕ್ಷ್ಮಿ ಸಹಕಾರ ಬ್ಯಾಂಕ್ ಅಧ್ಯಕ್ಷ ಮುಕುಂದ ಕುಲಕರ್ಣಿ, ಉಪಾಧ್ಯಕ್ಷ ವಿಕಾಸ ಪದಕಿ, ನಿರ್ದೇಶಕರಾದ ವಿಜಯ ಜೋಶಿ, ಕೃಷ್ಣಾ ಗುನ್ನಾಳಕರ,ಗೋವಿಂದ ಜೋಶಿ ಶಂಕರ ಕುಲಕರ್ಣಿ, ಪವನ ಕುಲಕರ್ಣಿ, ವೀಣಾ ಟಂಕಸಾಲಿ, ರಾಧಾ ತಾವರಗೇರಿ, ಸಚೀನ್ ಮದ್ದಿಮಠ, ವಿಶ್ವನಾಥ ತಳವಾರ, ಪವನ ಮುರಾಳ, ಅಶೋಕ ಉಪಾಧ್ಯೆ, ವ್ಯವಸ್ಥಾಪಕರಾದ ಪದ್ಮಾವತಿ ಕುಲಕರ್ಣಿ, ಕಲ್ಯಾಣಿ ಸಂಗಮ, ಕೃಷ್ಣಾ ಜೋಶಿ, ಮಾಜಿ ನಿರ್ದೇಶಕರು, ಸಿಬ್ಬಂದಿ ಮೊದಲಾದವರು ಉಪಸ್ಥಿತರಿದ್ದರು.

# ಜು.3 ರಂದು ಫೋನ್–ಇನ್ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮೂಲಕ ಪ್ರಯಾಣಿಕರ ಅನುಕೂಲಕ್ಕಾಗಿ ಅಹವಾಲು ಮತ್ತು ಕುಂದು–ಕೊರತೆಗಳನ್ನು ಆಲಿಸಲು ಆ.3ರಂದು ಸೋಮವಾರ ಮಧ್ಯಾಹ್ನ 3.30 ರಿಂದ 4.30ರವರೆಗೆ ಫೋನ್–ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೂರವಾಣಿ 6366423887 ಸಂಖ್ಯೆಗೆ ಸಾರ್ವಜನಿಕರು ಕರೆ ಮಾಡಿ, ತಮ್ಮ ಕುಂದು–ಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದ್ದು ಸಾರ್ವಜನಿಕರು ಫೋನ್–ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸದುಪಯೋಗ ಪಡೆದುಕೊಳ್ಳಬೇಕೆಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

### ಬಿ.ಎಲ್.ಡಿ.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ. ರವಿಶಂಕರ್ ಬಿ.ಎಸ್. ಅಭಿಮತ

# ವ್ಯಸನಗಳಿಂದ ದೈಹಿಕ–ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ

■ ಉದಯರಶ್ಮಿ ದಿನಪತ್ರಿಕೆ




ಬಾಗಲಕೋಟೆ (ಜಮಖಂಡಿ): ವ್ಯಸನ ಎನ್ನುವುದು ಕೇವಲ ಮದ್ಯ, ಗುಟ್ಕಾ, ಸಿಗರೇಟ್ ಅಥವಾ ಮಾದಕ ವಸ್ತುಗಳ ಸೇವನೆಗೆ ಮಾತ್ರ ಸೀಮಿತವಲ್ಲ. ಸಮಯದ ದುರ್ಬಳಕೆ, ಮೊಬೈಲ್‌ಗಳ ಅತಿಯಾದ ಬಳಕೆ ಸೇರಿದಂತೆ ಜೀವನಶೈಲಿಯಲ್ಲಿನ ಅನಾರೋಗ್ಯಕರ ಅಭ್ಯಾಸಗಳೂ ವ್ಯಸನಗಳೇ ಆಗಿದ್ದು, ಇವು ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತವೆ ಎಂದು ಬಿ.ಎಲ್.ಡಿ.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ. ರವಿಶಂಕರ್ ಬಿ.ಎಸ್. ಹೇಳಿದರು.

ಡಾ.ಮಹಾಂತ ಶಿವಯೋಗಿ ಸ್ವಾಮೀಜಿಯವರ ಜನ್ಮದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಆರ್.ಎಸ್. ಕಾಗವಾಡೆ ಮಾತನಾಡಿ, ಮಕ್ಕಳಲ್ಲಿ ಉತ್ತಮ ಸಂಸ್ಕಾರಗಳನ್ನು ಬೆಳೆಸುವ ಹೊಣೆಗಾರಿಕೆ ಪೋಷಕರ ಮೇಲಿದೆ. ಇಂದಿನ ಯುವಜನತೆಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಅವರನ್ನು ದುಶ್ಚಟಗಳಿಂದ ದೂರವಿಡಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳು ಡಾ. ಮಹಾಂತ ಶಿವಯೋಗಿ ಸ್ವಾಮೀಜಿಯವರ ದುಶ್ಚಟಗಳ ವಿರುದ್ಧದ ಹೋರಾಟವನ್ನು ಬಿಂಬಿಸುವ ಜಾಗೃತಿ ನಾಟಕವನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದರು.

ಪ್ರೊ. ಕೆ.ಜೆ. ಜೀರಗಾಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಪ್ರೇಮಾನಂದ ಹಿರೇಮಠ ವ್ಯಸನಮುಕ್ತ ಪ್ರತಿಜ್ಞಾವಿಧಿ ಬೋಧಿಸಿದರು.

ಪ್ರಶಿಕ್ಷಣಾರ್ಥಿಗಳಾದ ಅಭಿಷೇಕಗೌಡ ಪಾಟೀಲ ಹಾಗೂ ಪ್ರತಿಭಾ ಜಂಬಗಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸೌಜನ್ಯ ಕೊಣ್ಣೂರ ಪ್ರಾರ್ಥನೆ ಸಲ್ಲಿಸಿದರು. ಕಮಲವ್ವ ಒನಕಿ ಸ್ವಾಗತಿಸಿದರು. ರವೀನಾ ನದಾಫ್ ಪರಿಚಯಿಸಿದರು. ಪ್ರದೀಪ ಹುಕ್ಕೇರಿ ಹಾಗೂ ರೇಣುಕಾ ಚಂಡಕಿ ಕಾರ್ಯಕ್ರಮ ನಿರೂಪಿಸಿದರು. ಕಾಡಪ್ಪ ಜನವಾಡ ವಂದನಾರ್ಪಣೆ ಸಲ್ಲಿಸಿದರು.

# ತಪಸ್ಸಿನಂತೆ ವಿದ್ಯಾಭ್ಯಾಸ ಮಾಡಿದರೆ ಯಶಸ್ಸು ಖಚಿತ: ಪ್ರೊ.ಪಾಂಡುರಂಗ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ವಿದ್ಯಾರ್ಥಿಗಳು ಶೈಕ್ಷಣಿಕ ಬದುಕನ್ನು ತಪಸ್ಸಿನಂತೆ ಕಳೆಯಬೇಕು. ಸ್ಪಷ್ಟ ಗುರಿಯೊಂದಿಗೆ ನಿರಂತರ ಪರಿಶ್ರಮ ಮಾಡಿದರೆ ಯಶಸ್ಸು ಸಹಜವಾಗಿ ಲಭಿಸುತ್ತದೆ ಎಂದು ಬೆಂಗಳೂರು ಕ್ರೋಮ್ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಪ್ರೊ. ವಿ.ಎಲ್.ಪಾಂಡುರಂಗ ಹೇಳಿದರು.

ಅವರು ತಾಲ್ಲೂಕಿನ ಮೋರಟಗಿ ಗ್ರಾಮದಲ್ಲಿ ಶನಿವಾರ ಸಿದ್ದರಾಮೇಶ್ವರ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆದ ಕಲ್ಪವೃಕ್ಷ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಥಮ ಪಿಯುಸಿ ಮತ್ತು ಪ್ರಥಮ ಸೆಮಿಸ್ಟರ್ ಪದವಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಹಿಂದೆ ಪೋಷಕರ ಶ್ರಮ ಮತ್ತು ತ್ಯಾಗವಿರುವುದನ್ನುಅರಿತುಕೊಳ್ಳಬೇಕು.ಜೀವನದಲ್ಲಿಉನ್ನತ ಗುರಿಯನ್ನು ಇಟ್ಟುಕೊಂಡು ಶ್ರದ್ಧೆಯಿಂದ ಓದುಬರಹದಲ್ಲಿ ತೊಡಗಿದರೆ ಗುರಿ ತಲುಪುವುದು ಸಾಧ್ಯ. ಅವಕಾಶಗಳು ಎಲ್ಲರಿಗೂ ಸಿಗುತ್ತವೆ. ಆದರೆ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾನ್ನಿಧ್ಯವಹಿಸಿದ್ದ ಸದಾನಂದ ಶರಣರು ಆಶೀರ್ವಚನ ನೀಡಿ, ಭಾರತವು ಶ್ರೇಷ್ಠ ಗುರುಪರಂಪರೆಯ ದೇಶವಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ತಾಯಿ ಉಸಿರು ಕೊಡುತ್ತಾಳೆ, ತಂದೆ ಹೆಸರು ಕೊಡುತ್ತಾರೆ, ಆದರೆ ಸಮಾಜದಲ್ಲಿ ಅರ್ಥಪೂರ್ಣ ಬದುಕು ಕಟ್ಟಿಕೊಡುವವರು ಗುರುಗಳು ಎಂದು ಹೇಳಿದರು. ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ಸಂಸ್ಕಾರವನ್ನು ರೂಢಿಸಿಕೊಳ್ಳಬೇಕು, ಅಂಕಗಳಿಕೆಯಷ್ಟೇ ಅಲ್ಲ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಸಂಸ್ಥಾಪಕರು ಹಾಗೂ ಅಧ್ಯಕ್ಷ ಶಿವಶರಣಗೌಡ ವಿ. ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ಡಾ. ದತ್ತಾತ್ರೇಯ ರೇ. ಮಳಖೇಡ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಎಸ್.ಎಚ್. ಧೂಳಬಾ ಹಾಗೂ ಡಾ. ವಿರೂಪಾಕ್ಷಪ್ಪ ಬಿರಾದಾರ ಉಪಸ್ಥಿತರಿದ್ದರು. ಎಂ.ಸಿ. ಸಿಂದಗಿ ಅವರನ್ನು ಸನ್ಮಾನಿಸಲಾಯಿತು. ಕಲ್ಪವೃಕ್ಷ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಭಾರತಿ ಚಿಕ್ಕಲಗಿ ಮತ್ತು ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಎ.ಬಿ. ಸಿಂದಗಿ ವೇದಿಕೆಯಲ್ಲಿದ್ದರು.

ಕುಮಾರಿಪ್ರಿಯಾ ಬಿರಾದಾರ ಮತ್ತು ಅಂಕಿತಾ ಜಮಾದಾರ ಪ್ರಾರ್ಥನಾಗೀತೆ ಹಾಡಿದರು. ಭಾರತಿ ಚಿಕ್ಕಲಗಿ ಸ್ವಾಗತಿಸಿದರು .

# ಮಧುರಚೆನ್ನರು ಜನಮಾನಸದಲ್ಲಿ ಉಳಿದ ಕವಿ :ಬಂಡಗಾರ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ಕನ್ನಡ ನವೋದಯ ಸಾಹಿತ್ಯದ ಪ್ರಮುಖ ಕವಿ ಮಧುರಚೆನ್ನರು ಜನಮಾನಸದಲ್ಲಿ ಶಾಶ್ವತವಾಗಿ ಉಳಿದ ದಾರ್ಶನಿಕ ಕವಿ ಭೀಮೆಯ ತಟದಲ್ಲಿ ಹುಟ್ಟಿ ಬೆಳೆದ ಅವರು ತಮ್ಮ ಕಾವ್ಯದ ಮೂಲಕ ನಮ್ಮ ನೆಲದ ಅಸ್ಮಿತೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿದಿದ್ದಾರೆ ಎಂದು ಸಾಹಿತಿ ಸಿ.ಎಂ. ಬಂಡಗಾರ ಹೇಳಿದರು.

ತಾಲೂಕಿನ ಮೋರಟಗಿ ಗ್ರಾಮದ ಕಲ್ಪವೃಕ್ಷ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಲಸಂಗಿ ಗೆಳೆಯ ವತಿಯಿಂದ ಪ್ರತಿಷ್ಠಾನ ಹಾಗೂ ಕಲ್ಪವೃಕ್ಷ ಕಲಾವಾಣಿಜ್ಯ ಮತ್ತು ವಿಜ್ಞಾನ ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಮಧುರಚೆನ್ನರ 123ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಿಸರ್ಗದೊಂದಿಗೆ ಕಾವ್ಯದ ಲೇಪನ ಮಾಡಿ ಜಾಗತಿಕ ಆಧ್ಯಾತ್ಮಿಕ ಸಾಹಿತ್ಯಲೋಕದಲ್ಲಿ ಮಧುರಚೆನ್ನರು ವಿಶಿಷ್ಟ ಹೆಸರನ್ನು ಗಳಿಸಿದ್ದು, ಹಲಸಂಗಿಯನ್ನು ನವೋದಯ ಕಾವ್ಯದ ಕೇಂದ್ರವನ್ನಾಗಿ ರೂಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲ್ಪವೃಕ್ಷ ಕಾಲೇಜಿನ ಪ್ರಾಂಶುಪಾಲ ಎ.ಬಿ. ಸಿಂದಗಿ ಮಾತನಾಡಿ ಮಧುರಚೆನ್ನರ ಸಾಹಿತ್ಯ ಮತ್ತು ಚಿಂತನೆಯ ಮೇಲೆ ಶ್ರೀ ಅರವಿಂದರ ಪ್ರಭಾವ ಸಾಕಷ್ಟಿತ್ತು. ಅನುಭಾವದ ನೆಲೆಯಲ್ಲಿ ಅವರು ಸೃಷ್ಟಿಸಿದ ವಿಶಿಷ್ಟ ಸಾಹಿತ್ಯ ಕನ್ನಡಕ್ಕೆ ಅಮೂಲ್ಯ ಕೊಡುಗೆಯಾಗಿದ್ದು, ಅವರ ಸಾಹಿತ್ಯ ಪರಂಪರೆ ಸದಾ ಅವಿಸ್ಮರಣೀಯವಾಗಿರಲಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಜ್ಯೋತಿಬೆಳಗಿಸಿ ಸಂಸ್ಥೆಯ ಅಧ್ಯಕ್ಷ ಶಿವಶರಣಗೌಡ ಬಿರಾದಾರ ಉದ್ಘಾಟಿಸಿದರು.

ಮಧುರಚೆನ್ನರ ಮೊಮ್ಮಕ್ಕಳಾದ ಜಗದೀಶ ಗಲಗಲಿ,ಹಾಗೂ ಮಹಾದೇವಿ ಗಲಗಲಿ ಮಾತನಾಡಿ, ಕವಿಯ ಬದುಕು, ಸಾಹಿತ್ಯ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಸ್ಮರಿಸಿದರು.

ಪ್ರತಿಷ್ಠಾನದ ಸದಸ್ಯ ಬಿ.ಆರ್. ಬನಸೋಡೆ ಪ್ರಾಸ್ತಾವಿಕವಾಗಿ ಮಾತನಾಡಿ ಮಧುರಚೆನ್ನರು ಓದಿದ್ದು 7ನೇ ತರಗತಿಯಿದ್ದರೂ 22 ಭಾಷೆಗಳನ್ನು ಬಲ್ಲವರಾಗಿದ್ದರು ಎಂದರು.

ವೇದಿಕೆಯಲ್ಲಿ ಪ್ರತಿಷ್ಠಾನದ ಸದಸ್ಯರಾದ ಪುಲಕೇಶಿ ಪುರುಷೋತ್ತಮ ಗಲಗಲಿ ಹಾಗೂ ದಾಕ್ಷಾಯಣಿ ಬಿರಾದಾರ, ಅಂಜನಾ ಇಜೇರಿ ಜಿಲಾನಿ ನಾಗಾವಿ ಉಪಸ್ಥಿತರಿದ್ದರು.

ಪ್ರತಿಷ್ಠಾನದ ಕಾರ್ಯದರ್ಶಿ ಸಂತೋಷ ಭೋವಿ ಸ್ವಾಗತಿಸಿದರು. ಸದಸ್ಯ ಡಾ. ರಮೇಶ ಕತ್ತಿ ವಂದಿಸಿದರು. ಪ್ರೊ. ಜಿ.ಎಂ.ಪಾಟೀಲ ನಿರೂಪಿಸಿದರು.

ಕಲಾವಿದ ಭೀಮು ಕಟ್ಟಿಮನಿ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆದವು.

### ಸಿಸಿಟಿವಿ, ವೆಬ್ ಕಾಸ್ಟಿಂಗ್ ವ್ಯವಸ್ಥೆ । ಪರೀಕ್ಷೆ ಬರೆಯಲಿರುವ 24434 ಅಭ್ಯರ್ಥಿಗಳು । 61 ಪರೀಕ್ಷಾ ಕೇಂದ್ರಗಳಲ್ಲಿ 24434 ಅಭ್ಯರ್ಥಿಗಳು ನೋಂದಣಿ

# ಕಾನ್ಸ್‌ಟೇಬಲ್ ನೇಮಕಾತಿ ಪರೀಕ್ಷೆಗೆ ಜಿಲ್ಲಾಡಳಿತ ಸಜ್ಜು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ ವೃಂದ ಪೊಲೀಸ್ ಕಾನ್ಸ್‌ಟೆಬಲ್ (ಸಿವಿಲ್) ಹುದ್ದೆಗಳ ನೇಮಕಾತಿ ಲಿಖಿತ ಪರೀಕ್ಷೆ (ಆ. 2) ಭಾನುವಾರ ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಒಟ್ಟು 24434 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದು, ಪಾರದರ್ಶಕ ಪರೀಕ್ಷೆ ನಡೆಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ವಿಜಯಪುರ ನಗರ–55, ತಿಕೋಟಾ ನಗರ–03 ಸೇರಿ ಒಟ್ಟು 58 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆದರೆ, ವಿಜಯಪುರ ಗ್ರಾಮೀಣ ಭಾಗದ ಕವಲಗಿಯಲ್ಲಿ 2 ಹಾಗೂ ತಿಡಗುಂದಿಯಲ್ಲಿ 1 ಸೇರಿದಂತೆ ಒಟ್ಟು 3 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ.

60 ಮಾರ್ಗಾಧಿಕಾರಿಗಳು: ನಕಲು ರಹಿತ ಹಾಗೂ ಪಾರದರ್ಶಕವಾಗಿ ಪರೀಕ್ಷೆ ನಡೆಸುವ ದೂರದೃಷ್ಟಿಯಿಂದ ಒಟ್ಟು 20 ಮಾರ್ಗಗಳಿಗೆ 60 ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. 61 ವೀಕ್ಷಕರು, 61 ಉಪ ಮುಖ್ಯ ಅಧೀಕ್ಷಕರು, 61 ಜನ ಪ್ರಶ್ನೆ ಪತ್ರಿಕೆ ಪಾಲಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.



61 ವಸ್ತ್ರ ಸಂಹಿತೆ ಅಧಿಕಾರಿಗಳು: ಜೊತೆಗೆ 61 ಜನರನ್ನುಳ್ಳ ವಿಶೇಷ ಜಾಗೃತ ದಳ ಸದಸ್ಯರನ್ನು ಪರೀಕ್ಷೆಗೆ ನಿಯೋಜಿಸಲಾಗಿದೆ. 10 ಜನ ವೆಬ್ ಕ್ಯಾಸ್ಟಿಂಗ್ ವೀಕ್ಷಣಾ ತಂಡದ ಸದಸ್ಯರಿದ್ದಾರೆ. 61 ವಸ್ತ್ರ ಸಂಹಿತೆ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

244 ಸ್ವಯಂ ಸೇವಕರು ಹಾಗೂ 61 ನೋಡಲ್ ಅಧಿಕಾರಿಗಳು, 244 ಫ್ರಿಸ್ಕಿಂಗ್ ಸಿಬ್ಬಂದಿ, 61 ಫ್ರಿಸ್ಕಿಂಗ್ ನೋಡಲ್ ಅಧಿಕಾರಿಗಳು, 1020 ಕೊಠಡಿ ಮೇಲ್ವಿಚಾಕರನ್ನು ಹಾಗೂ 61 ಹೆಚ್ಚುವರಿ ಕೊಠಡಿ ಮೇಲ್ವಿಚಾರಕರು ಪರೀಕ್ಷಾ ಅವಧಿಯುದ್ದಕ್ಕೂ ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ವಹಿಸಲಿದ್ದಾರೆ.

ವಸ್ತ್ರ ಸಂಹಿತೆ: ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಈ ಉಡುಪುಗಳನ್ನು ಧರಿಸಬಹುದು. ಆದರೆ ತಪಾಸಣೆಗೊಳಪಡಬೇಕು. ಪುರುಷ ವಿದ್ಯಾರ್ಥಿಗಳು ಜನಿವಾರ, ಶಿವದಾರ, ಲಿಂಗ, ಉಡ–'ದಾರ, ತಾಯಿತ, ರುದ್ರಾಕ್ಷಿ, ಕೈಕಟ್ಟುವ ಧಾರ್ಮಿಕ ಕ್ಷೇತ್ರದ ದಾರ ಧರಿಸಬಹುದಾದರೆ, ಮಹಿಳಾ ಅಭ್ಯರ್ಥಿಗಳು ಮಾಂಗಲ್ಯ ಸರ, ಕೈಬಳೆಗಳು, ಮೂಗುತಿ, ಕಾಲುಂಗುರ, ಕಾಲುಗೆಜ್ಜೆ, ಕುಂಕುಮ, ಹಣೆಬಟ್ಟು, ಉಂಗುರ ಧರಿಸಬಹುದಾಗಿದೆ.

ಕೆಲ ಸಮುದಾಯದ ವಿದ್ಯಾರ್ಥಿಗಳು ಧಾರ್ಮಿಕ ಉಡುಪುಗಳನ್ನು ಧರಿಸಿಕೊಂಡು ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಪರೀಕ್ಷಾ ಆರಂಭಕ್ಕೆ 2:30 ಗಂಟೆ ಮೊದಲು ಪರೀಕ್ಷಾ ಕೇಂದ್ರದ ವಸ್ತ್ರ ಸಂಹಿತೆ ಅಧಿಕಾರಿ ಮುಂದೆ ಹಾಜರಾಗಬೇಕು. ವಸ್ತ್ರ ಸಂಹಿತೆ ಅಧಿಕಾರಿ ಪ್ರತ್ಯೇಕ ಕೊಠಡಿಯಲ್ಲಿ ನಿಯಮಾನುಸಾರ ತಪಾಸಣೆಗೆ ಒಳಪಡಿಸಿದ ಬಳಿಕ ಪರೀಕ್ಷಾ ಕೊಠಡಿಗೆ ಪ್ರವೇಶ ನೀಡಲಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಇವೆಲ್ಲ ಪರೀಕ್ಷೆಯಲ್ಲಿ ನಿಷೇಧ: ಎಲೆಕ್ಟ್ರಾನಿಕ್ ವಸ್ತುಗಳು : ಮೊಬೈಲ್ ಫೋನ್, ಬ್ಲ್ಯೂ ಟೂತ್, ಇಯರ್ ಫೋನಗಳು, ಮೈಕ್ರೋಫೋನ್, ಪೇಜರು, ಮೈಕ್ರೊಚಿಪ್, ಕ್ಯಾಮೇರಾ, ಪೆನ್ ಡ್ರೈವ್‌ಗಳು, , ಎಲೆಕ್ಟ್ರಾನಿಕ್ ಪೆನ್, ಸ್ಕ್ಯಾನರ್, ಕೈಗಡಿಯಾರ, ಸ್ಮಾರ್ಟ್‌ವಾಚ್, ಆಧುನಿಕ ಸಂವಹನ ಸಾಧನಗಳು, ಇತ್ಯಾದಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಪರೀಕ್ಷಾ ಕೇಂದ್ರದ ಒಳಗಡೆ ಪರೀಕ್ಷಾರ್ಥಿಗಳು ತೆಗೆದುಕೊಂಡು ಹೋಗಲು ಅವಕಾಶವಿಲ್ಲ ಎಂದವರು ತಿಳಿಸಿದ್ದಾರೆ.

ಆಹಾರ, ಪಾನೀಯಗಳು: ತೆರೆದಿರುವ ಅಥವಾ ಯಾವುದೇ ಪ್ಯಾಕ್ ಮಾಡಲಾದ ಪದಾರ್ಥಗಳು, ನೀರಿನ ಬಾಟಲ್, ಪಾನೀಯ ಬಾಟಲ್ ಪರೀಕ್ಷಾ ಕೇಂದ್ರದ ಒಳಗೆ ಪರೀಕ್ಷಾರ್ಥಿಗಳು ತೆಗೆದುಕೊಂಡು ಹೋಗಲು ಅವಕಾಶ ಇರುವುದಿಲ್ಲ.

ಪಠ್ಯ ಸಾಮಗ್ರಿಗಳು ಬರೆದಿಟ್ಟುಕೊಂಡಿರುವ ಅಥವಾ ಪ್ರಿಂಟ್ ಇರುವ ಚೀಟಿಗಳು, ಪುಸ್ತಕಗಳು, ಜಾಮಿಟ್ರಿ ಬಾಕ್ಸ, ಪೇನ್ಸಿಲ್ ಬಾಕ್ಸ್, ಪ್ಲಾಸ್ಟಿಕ್ ಪೌಚ್, ಕ್ಯಾಲ್ಕುಲೇಟರ್, ಸ್ಕೇಲ್, ಬರೆಯುವ ಪೇಪರ್, ಎರೇಸರ್, ಲಾಗ ಟೇಬಲ್ ಇತ್ಯಾದಿ ಬರಹಗಳಿರುವ ವಸ್ತುಗಳು ಪರೀಕ್ಷಾ ಕೇಂದ್ರದ ಒಳಗೆ ಪರೀಕ್ಷಾರ್ಥಿಗಳು ತೆಗೆದುಕೊಂಡು ಹೋಗಲು ಅವಕಾಶ ಇರುವುದಿಲ್ಲ.

ಇತರೆ: ಶೂಗಳು, ಬೂಟ್ಸ್, ಕ್ಯಾಪ್, ಕಿವಿ, ತಲೆ ಮತ್ತು ಮುಖ ಮುಚ್ಚುವಂತಹ ಯಾವುದೇ ಉಡುಪುಗಳು, ಬ್ಯಾಗ್, ಪರ್ಸು, ಹೆಚ್ಚು ಜೇಬುಗಳಿರುವ ಜೀನ್ಸ್ ಪ್ಯಾಂಟ್‌ಗಳು ಪರೀಕ್ಷಾ ಕೇಂದ್ರದ ಒಳಗೆ ಪರೀಕ್ಷಾರ್ಥಿಗಳು ಧರಿಸಿ ಹೋಗಲು ಅವಕಾಶ ಇರುವುದಿಲ್ಲ.

ಅಕ್ರಮಕ್ಕೆ ಕಠಿಣ ಕ್ರಮ: ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಸಿ.ಸಿ.ಟಿ.ವ್ಹಿ ಕ್ಯಾಮೇರಾ, ವೆಬ್ ಕಾಸ್ಟಿಂಗ್ ಮೂಲಕ ನಿಗಾವಹಿಸಲಾಗುವುದು. ಪರೀಕ್ಷೆಯಲ್ಲಿ ಅಕ್ರಮ ಎಸಗಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಪರೀಕ್ಷಾ ಸಮಯದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ, ನಕಲಿ ಸುದ್ದಿ ಹಾಗೂ ವಂಚನೆ ತಡೆಯಲು ಪೊಲೀಸ್ ಇಲಾಖೆಯು ಎಲ್ಲಾ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾವಹಿಸುತ್ತಿದೆ. ಜಿಲ್ಲೆ ಎಲ್ಲ ಕೋಚಿಂಗ್ ಸೆಂಟರ್ ಗಳ ಮೇಲೆ ಪೊಲೀಸ್ ಇಲಾಖೆಯ ಕಣ್ಗಾವಲು ಇದ್ದು, ಪರೀಕ್ಷಾ ದಿನದಂದು ಯಾವುದೇ ಕೋಚಿಂಗ್ ಸೆಂಟರ್ ತೆರೆಯುವಂತಿಲ್ಲ ಒಂದು ವೇಳೆ ಅಕ್ರಮ ಎಸಗಿದರೆ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದವರು ತಿಳಿಸಿದ್ದಾರೆ.

200 ಮೀ. ಪ್ರದೇಶ ನಿಷೇಧ: ಪರೀಕ್ಷಾ ಕೇಂದ್ರವಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಯಾವುದೇ ಪಧಾಧಿಕಾರಿಗಳು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವದನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಪರೀಕ್ಷೆ ಮುಗಿಯುವವರೆಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 2023 ರ ಕಲಂ 163 ರ ಪ್ರಕಾರ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ ಝರಾಕ್ಸ್ ಅಂಗಡಿಗಳು, ಕಂಪ್ಯೂಟರ್ ಸೆಂಟರ್ ಗಳು, ಸೈಬರ್ ಕೇಫೆಗಳು ಪರೀಕ್ಷೆ ನಡೆಯುವ ಅವಧಿಯಲ್ಲಿ ತೆರೆಯದಂತೆ ನಿಷೇಧಿಸಿ ಆದೇಶಿಸಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR